Sri G. SIVAPPA.—Then I welcome that. So it is our duty to learn Hindi as early as possible. Otherwise, politicians will have to suffer in the long run, because some of our friends who wish to go to Parliament elected have to learn Hindi and it will be almost enforced upon them that they should learn Hindi language. It is also one of the qualifications for election to the Parliament as a member. So it is very necessary that both politicians and also others should take to it as early as possible. We must pay high tribute to the ladies of Mysore particularly. We are surprised to learn that more than 50 per cent of the ladies in cities and towns have picked up Hindi as early as possible. It is very surprising to know that there are many good orators speaking in Hindi language. I am sure that this language will almost be the mother tongue for our children in future so that there will be no question of having this language problem at all in future. With these words I recommend that the Government may be more sympathetic towards some of these institutions running in Bangalore City and also Mysore City and come forward with greater help to them so that they can propagate the Hindi language to a greater extent. It is learnt that Government are thinking of standardising final examinations. It is a very good thing. In fact the Director of Public Instruction is paying much attention towards this and I am sure that Government will achieve the object of teaching Hindi to our people as early as possible, say in about 15 years. I believe it may even be earlier than 15 years. With these words I support the cut motion.

Sri M. PALANIYAPPAN (Ulsoor).—I want to oppose the cut motion.

Mr. SPEAKER.—That will do for the time being. There are so many cut motions yet to be covered.

Sri M. PALANIYAPPAN.—I want to oppose the cut motion.

Mr. SPEAKER.—You please read the articles in the Constitution and see whether you can oppose it or not.

***Sri A. G. RAMACHANDRA RAO** (Minister for Law and Education).—Sir, I may be permitted to speak just a few words in Hindi because the Hon'ble Member Sri Sivappa has been good enough to speak in that language. He has begun to speak in this Hon'ble House in Hindi for the first time. Therefore I believe it is in the fitness of things that I just refer to it in Hindi in a few sentences in reply to him and come back to reply either in English or in Kannada, as may be directed by the Chair.

Mr. SPEAKER.—Before proceeding further, I will just read article 210 about the language to be used in the Legislature. It is my duty to see that if Hon'ble Members want to speak in Hindi, I cannot ask them not to do so. They have a right to speak in Hindi. Article 210 reads as follows :—

> "(1) Notwithstanding anything in Part XVII, but subject to the provisions of article 348, business in the Legislature of a State shall be transacted in the official language or languages of the State or in Hindi or in English :
>
> Provided that the Speaker of the Legislative Assembly or Chairman of the Legislative Council, or person acting as such, as the case may be, may permit any member who cannot adequately express himself in any of the languages aforesaid to address the House in his mother tongue."

(Sri G. Sivappa rose)

Mr. SPEAKER.—The Hon'ble Member may please resume his seat. There is no necessity for him to rise. It is said in the above article 'Subject to article 348'. Of course the practice is to speak either in Kannada or in English, because all Hon'ble Members of this House including the Speaker could follow one of these two languages. As regards Hindi,—though it may not be quite relevant on my part to speak of myself, though I happen to be the President of the Mysore Hindi Sahitya Parishad, though I can follow to some extent,—it will be difficult on my part to speak in Hindi. I know Sri G. Sivappa the mover of this cut motion has exhibited his knowledge of Hindi, having learnt it recently, though he made slight mistakes here and there. But in the interest of the debate in this House it is better I appeal to you and I hope the House will not mistake me when I say that speeches may not be made in Hindi in this House. Just to

(MR. SPEAKER.)

facilitate the members of the House, members may kindly speak either in English or in Kannada. Otherwise some other member will rise and speak in Tamil or in some other language because that is his mother tongue. "I cannot understand either Hindi or English" so they may say and speak in their mother tongue, though some of them are known and are in the habit of speaking in one of these languages. 'My mother tongue is Telugu or Tamil and so I will begin to speak in Tamil or Telugu' so they may say, in which case new problems will arise. So we will follow the old practice. That does not mean that we must not try to speak in Hindi. I just wanted to explain so that the House will not mistake me when I request you and appeal to Sri Sivappa not to speak in Hindi so that I can follow him very well.

***Sri A. G. RAMACHANDRA RAO.**—I submit that in order to mark this historic event, so I put it in the interest of Hindi, I may be permitted to speak a few words in Hindi.

(The Minister spoke in Hindi for some time.)

Sir, the Hon'ble Member who moved the cut motion has pointed out how easily he learnt Hindi, how in a short time he has been able to pick up the language and that at no cost. And this should encourage all of us to learn the language, the national language, as early as possible. In this I must pay my great respect to the Speaker who is elected President of the Mysore Hindi Sahitya Parishad. He has been taking a good lot of interest. He has realised the importance and the urgency for the spread of Hindi and I am sure that in a short time he will have trained a large number of persons to speak in the language in an easy manner and with as much facility as we speak in either English or Kannada.

Now the cut motion refers to the spread of Hindi in all educational institutions. I must submit that at present it is compulsory as a non-examination subject in all the secondary schools. The question was further considered by the Educational Reforms Committee and they have said that from the 4th year onwards Hindi should be made a compulsory subject up to almost the end of the secondary course, so that in the course of 4 to 6 years at the rate of three periods per day the students will have become proficient in Hindi language. I personally feel that it is a good recommendation. It is under the consideration of the Government.

In Mysore, Hindi is being propagated by a number of institutions, particularly the four institutions mentioned by him. They have been given grants from Government and they are being patronised by the public as well. I am very glad to see that it has entered the homes of almost everybody in Bangalore and Mysore cities, particularly because very many girl students have taken to Hindi

2-30 P.M.

and they have been learning in schools and colleges or private institutions and carrying back the message to their own homes and teaching them to their sisters and brothers.

In the University stage, we have already about ten lecturers in Hindi. We have an Assistant Professor; we have addressed a letter for a special grant to the Government of India in order to create a professorship and otherwise strengthen the University staff in Hindi also and for equipping the library properly. I am very glad to say that out of ten lecturers seven are students of Benares Hindu University and I believe most of them are M.A.'s in that subject and their teaching is very much appreciated. Further, Sir, the College Hindi Staff in Mysore have also instituted a diploma course, by which method the public as well as the students are going to make it a special course of study which will benefit students in the schools also.

Regarding the Government, Sir, it is under contemplation to make a rule whereby all those who are to serve the State for more than 15 years, should be asked to take some simple examinations in Hindi in view of our Constitution asking us to have correspondence inter-State as well as in the Centre as far as possible in Hindi in the course of 15 years. In order to enable Government servants to become familiar with the language and see that they attend to this correspondence more easily, that also is under contemplation; and I trust that necessary steps and decisions will be taken early and implemented. Therefore Sir, I may submit that both in the educational institutions in the public as well as in the Government circles, necessary attention is being paid for the spread of Hindi, the national language, both in the interest of national solidarity and unity as well as for the progress of the country.

With these few remarks, I request once again Sri G. Sivappa to withdraw this cut motion with this assurance.

Sri G. SIVAPPA.—I seek leave to withdraw the cut motion, Sir.

The cut motion was, by leave, withdrawn.

Mr. SPEAKER.—Sri Madiah can move any one of his two cut motions so that others will have an opportunity of speaking on that cut motion.

Sri M. MADIAH (Nanjangud—Scheduled Castes).—I have requested the Chair to permit me to move both the cut motions and draw attention to some grievances of the scheduled castes. As a special case, I may be permitted to move both the cut motions, Sir. However, I will certainly obey the Chair.

Mr. SPEAKER.—You can refer to the subject of the second cut motion while moving the first one or *vice versa* ; because my difficulty is, if I give you a chance to move two cut motions which stand in your name, the next person Sri G. Puttaswamy has got ten cut-motions in his name. Others will be deprived of moving any cut motions.

Sri M. MADIAH.—I will obey the Chair, Sir. I will move the first cut motion.

Scholarships to Scheduled Castes Students in Middle and High Schools

***Sri M. MADIAH.**—Sir, I beg to move :

"That the demand under the head '37, Education' for Rs. 3,77,90,000 be reduced by Rs. 100 (to urge the need for providing adequate number of Depressed Class Scholarships to the Scheduled Caste students studying in High and Middle schools in the State)."

ಸ್ವಾಮಿ, ಈ ಖೋತಾ ಸೂಚನೆ ಮೇಲೆ ಮಾತನಾಡುವಾಗ ನನಗೆ ಅಷ್ಟು ಉತ್ಸಾಹ ಬರುತ್ತಾ ಇಲ್ಲ. ಕಾರಣ ಈ ಖೋತಾ ಸೂಚನೆಯಲ್ಲಿ ಅಡಗಿರತಕ್ಕಂಥ ವಿಷಯದ ಮೇಲೆ ಮಾತನಾಡಿದನಂತರ ದೊರೆಯಬಹುದಾದ ಉತ್ತರದ, ಫಲಿತಾಂಶದ ವಿಚಾರದಲ್ಲಿ ಶಂಕೆಯಾಗಿರುವುದರಿಂದ ನಿರುತ್ಸಾಹ ಉಂಟಾಗಿದೆ. ಆದರೂ ಸಹ ನನ್ನ ಕರ್ತವ್ಯವನ್ನು ಮಾಡಬೇಕೆಂದು ಹೇಳಿ ನನಗೆ ಜನಾರ್ದನನ ಪ್ರೇರಣೆಯಾಗಿದೆ.

ಸ್ವಾಮಿ, ನಿಮ್ನತರಗತಿಯವರ, ದಲಿತವರ್ಗದವರ ವಿದ್ಯಾಭಿವೃದ್ಧಿ ವಿಚಾರದಲ್ಲಿ ಏನಾದರೂ ಈ ಸಭೆಯಲ್ಲಿ ಕೇಳಿದರೆ ಆ ರೀತಿ ಕೇಳುವುದು ಉಚಿತವಲ್ಲ, ಅಥವಾ ಹಾಗೆ ಕೇಳಿದರೆ ವಿಶೇಷವಾಗಿ (exclusive ಆಗಿ) ಕೇಳಿದಂತೆ ಆಗುತ್ತದೆ, ಅಥವಾ ಹಾಗೆ ಕೇಳಿದರೆ ಅದು ರಾಜ್ಯಾಂಗದ provisions ಗೆ offend ಆದಂತೆ ಆಗುತ್ತದೆ ಎನ್ನುವಂಥ ಶಂಕೆ ಸರ್ಕಾರದಿಂದ ಬಂದಹಾಗೆ ನನಗೆ ಕಾಣುತ್ತದೆ. ಏನಾದರೂ ಹೇಳಿದರೆ ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು ಎಂದು ಹೇಳುತ್ತೇನೆ. ಉತ್ತರಕ್ಕೆ ಉತ್ತರ, ಜವಾಬಿಗೆ ಜವಾಬು ಹೇಳುವುದಕ್ಕೆ ನಾನು ಇಲ್ಲಿ ನಿಂತಿಲ್ಲ. ಭಾರತ ರಾಜ್ಯಾಂಗದಲ್ಲಿ ದಲಿತವರ್ಗದವರ ವಿದ್ಯಾಭಿವೃದ್ಧಿಗೆ ಸಾಕಾದಷ್ಟು ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಹೇಳಿ ನಿರ್ದಿಷ್ಟವಾಗಿ ಗೊತ್ತುಮಾಡಿದೆ. ಅದರಲ್ಲೂ ತತ್ರಾಪಿ ನಿಮ್ನವರ್ಗದವರ ಅಭಿವೃದ್ಧಿಗೆ ಹೆಚ್ಚು ನಿಗಾ ಕೊಡಬೇಕೆಂದು ಹೇಳಿದೆ. ಇದನ್ನು ಕೇಳಿದರೆ it is against the provisions of the Constitution...

Mr. SPEAKER.—It is too much to presume like that Sri Madiah.

ಶ್ರೀ ಎಂ. ಮಾದಯ್ಯ.—ಹಾಗೆ ಕೇಳಿದರೆ ರಾಜ್ಯಾಂಗದಲ್ಲಿ ಗೊತ್ತುಮಾಡಿರತಕ್ಕ ವಿಧಿಗೆ ಅಥವಾ ರಾಜ್ಯಾಂಗದ ಸ್ಪಿರಿಟ್‌ಗೆ ವಿರೋಧವಾಗುತ್ತದೆ ಎಂದು ಸರ್ಕಾರದಿಂದ ಉತ್ತರ ಬಂದಿದೆ. 19ನೇ ತಾರೀಖಿನ ದಿವಸ ಸರ್ಕಾರದವರು ಕೊಟ್ಟಿರತಕ್ಕ ಉತ್ತರದ ವರದಿಯನ್ನು ಪರಿಶೀಲನೆ ಮಾಡಿದರೆ ನನಗಾದರೂ ಹಾಗೆ ಅನ್ನಿಸಿತು. ನಾನು ಆ ರೀತಿ ತಿಳಿದುಕೊಂಡಿದ್ದೇನೆ. ದಯವಿಟ್ಟು ಹಾಗೆ ತಿಳಿದುಕೊಳ್ಳಬಾರದು ಎಂದು ನಾನು ಈ ಸಭೆಯಲ್ಲಿ ಸರ್ಕಾರದವರಲ್ಲಿ ವಿನಯಪೂರ್ವಕವಾಗಿ, ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದನ್ನು ನಾವು ಕೇಳುವಾಗ, ಸಾರ್ವಜನಿಕರಲ್ಲೂ ತತ್ರಾಪಿ ಈ ಮಾನ್ಯ ಸಭೆಯ ಸದಸ್ಯರಲ್ಲೂ, ನಮ್ಮ ಬೇಡಿಕೆ ಅಥವಾ ಈ ಪ್ರತಿನಿಧಿಗಳ ಬೇಡಿಕೆ ಬಹಳ ವಿಶೇಷವಾಗಿದ್ದು ಸರ್ಕಾರ ಬಹಳ ವಿಶೇಷವಾಗಿ ಕೊಡುತ್ತಾ ಇದೆ; ಆ ರೀತಿ ಕೇಳತಕ್ಕದ್ದು ತಪ್ಪು; ಅದು ನಮ್ಮ ಸಂಕುಚಿತವಾದ ಮನೋಭಾವವನ್ನು ವ್ಯಕ್ತಪಡಿಸಿದಹಾಗೆ ಇದೆ ಎನ್ನುವಂಥ ಸೂಚನೆ ಕಂಡು ಬಂದಿದೆ. ಅದೂ ಅಲ್ಲದೆ ಆ ದಿವಸ ಸರ್ಕಾರದ ಉತ್ತರ ಬಂದಾಗಲೂ ಸಹ, ಸಂಕುಚಿತ ಮನೋಭಾವದಿಂದ ಹರಿಜನ ಸದಸ್ಯರು ಹೋಗಬಾರದು ಎಂಬ ಸೂಚನೆಯೂ ಕೂಡ ಬಂದಿತು; ಹಾಗೆ

(ಶ್ರೀ ಎಂ. ಮಾದಯ್ಯ.)

ಎಂದು ನಾನು ತಿಳಿದುಕೊಂಡಿದ್ದೇನೆ. ಇದು ನಮ್ಮನ್ನು ಎಷ್ಟು ಉತ್ಸಾಹರಹಿತರನ್ನಾಗಿ ಮಾಡುತ್ತದೆ ಎಂಬುದನ್ನು ಈ ಸಭೆಯಲ್ಲಿ ಮನವರಿಕೆ ಮಾಡಿಕೊಳ್ಳುತ್ತಾ ಇದ್ದೇನೆ.

ಸ್ವಾಮಿ, ಭಾರತ ರಾಜ್ಯಾಂಗ ಒಂದು ಹೆಜ್ಜೆ ಮುಂದೆ ಹೋಗಿ ಈ ದಲಿತವರ್ಗದವರ ವಿದ್ಯಾಭ್ಯಾಸ ಸಾಮಾಜಿಕ ಅಭಿವೃದ್ಧಿ ಇವುಗಳ ವಿಚಾರದಲ್ಲಿ ಎಷ್ಟು ದೂರ ಆಯಾ ಸಂಸ್ಥಾನಗಳು ಮತ್ತು ಕೇಂದ್ರ ಮಾಡಬೇಕೆಂಬುದನ್ನು ಹೇಳಿದೆ. ಆ ರೀತಿ ಹೇಳಿರುವುದನ್ನು ಗೌರವಿಸುವುದನ್ನು ಬಿಟ್ಟು ಹಾಗೆ ಹೇಳಿರತಕ್ಕ, ಗೊತ್ತು ಮಾಡಿರತಕ್ಕ ಅಂಶವನ್ನು ಕೇಳಿದರೆ ಅದು ರಾಜ್ಯಾಂಗಕ್ಕೆ ವಿರೋಧವಾದಂತೆ ಆಗುತ್ತದೆ, ಒಬ್ಬರ ಹಿತವನ್ನೇ ನಾವು ನೋಡುತ್ತಾ ಇತರರ ಹಿತವನ್ನು ನಿರ್ಲಕ್ಷ್ಯ ಮಾಡಿದಂತಾಗುತ್ತದೆ ಎಂಬ ಅರ್ಥ ಬರುವಂತೆ ಹೇಳೋಣವಾಯಿತು. ಈ ತರಹವಾಗಿ ಉತ್ತರ ಕೊಡುವುದರಿಂದ—ಈ ಸರ್ಕಾರದ ಉತ್ತರ ಅವೊತ್ತಿನ ಪತ್ರಿಕೆಗಳಲ್ಲಿ ಪ್ರಚಾರವಾಗಿದೆ—ದೇಶದ ಜನತೆಯ ಮೇಲೆ ಎಂತಹ ಪರಿಣಾಮವುಂಟಾಗಬಹುದೆಂಬುದನ್ನು ಪರಿಶೀಲನೆ ಮಾಡಬೇಕಾದದ್ದು ಅತ್ಯವಶ್ಯಕ.

ಸ್ವಾಮಿ, ಯಾವ ಸರ್ಕಾರವೇ ಬರಲಿ, ಯಾರೇ ಇರಲಿ ಯಾವ ಸೌಲಭ್ಯವನ್ನು ಕೊಡಲಿ, ಕೊಡದೇ ಇರಲಿ ಈ ಅಂಶವನ್ನು ಮರೆಯುವ ಹಾಗಿಲ್ಲ. Evolution theory ಪ್ರಕಾರ ಯಾವ ಯಾವ ಕಾಲದಲ್ಲಿ ಏನೇನು ಆಗಬೇಕೋ ಅದರಂತೆ ಆಗುತ್ತದೆ. ನಾವು ಶಾಂತತೆಯಿಂದ ನಡೆಯಬೇಕಾಗಿದೆ. ಆದರೆ ನಾನು ಈ ಮಾನ್ಯ ಸಭೆಯ ಸದಸ್ಯರು ಸರ್ವರಲ್ಲೂ ಸಹ ಅರಿಕೆ ಮಾಡಿಕೊಳ್ಳುವುದೇನೆಂದರೆ ನಮಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕಾದದ್ದು ಎಲ್ಲರ ಮುಖ್ಯ ಕರ್ತವ್ಯ ಭಾರತ ರಾಜ್ಯಾಂಗವನ್ನು ಬರೆದಾಗ ಭಾರತವನ್ನು ಸೆಕ್ಯುಲರ್ ಸ್ಟೇಟ್ ಆಗಿ ಮಾಡಬೇಕೆಂದು ಹೇಳಿರತಕ್ಕದ್ದೇ ನಮ್ಮ substance of the Constitution ಎಂದು ಹೇಳಿ ತಿಳಿದುಕೊಂಡಿದ್ದೇನೆ. ಇದನ್ನು ಪ್ರಸ್ತಾಪಮಾಡಬೇಕಾದರೆ ಮೊದಲನೆಯ ದಿವಸವೇ ಹೇಳಿದೆ; ಭಾರತ ರಾಜ್ಯಾಂಗದ ಪ್ರಕಾರ ಸೆಕ್ಯುಲರ್ ಸ್ಟೇಟ್‌ನ ಫಲ ಹೇಗಿರಬೇಕೆಂಬುದನ್ನು ತಿಳಿಸಿದೆ. ಏನೆಂದರೆ ಸರ್ವೇಜನಾಸ್ಸುಖಿನೋಭವಂತು ಎಂದು ಏನೋ ಹೇಳುತ್ತಾರೋ ನನಗೆ ಹೇಳುವುದಕ್ಕೆ ಬರುವುದಿಲ್ಲ—ಹಾಗೆ ಹೇಳಿದ ಮೇಲೆ ಯಾರಿಗಾದರೂ ಅನ್ಯಾಯಮಾಡಿ ನಮಗೆ ಅನುಕೂಲ ಮಾಡಿಕೊಡಿ ಎಂದು ಹೇಳಿ ನನ್ನ ಮನಸ್ಸಿನಲ್ಲಾಗಲಿ ಅಥವಾ ಇತರ ಮಾನ್ಯ ಸದಸ್ಯರ ಮನಸ್ಸಿನಲ್ಲಾಗಲಿ ಇದೆಯೇ ಎಂಬುದನ್ನು ತಿಳಿದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ನಾನು ಸರ್ಕಾರದವರಲ್ಲಿ ತಿಳಿಸುತ್ತೇನೆ.

ಸ್ವಾಮಿ, ಈಗ ಮೈಸೂರು ಸಂಸ್ಥಾನದಲ್ಲಿನ ವಿದ್ಯಾಭ್ಯಾಸದ ಪ್ರಗತಿಯನ್ನು ಸ್ವಲ್ಪ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡ 13 ಇದೆ. ಕಳೆದ ಸೆನ್ಸಸ್ ನೋಡಿದರೆ ಸುಮಾರು 13 ರಿಂದ 20 ರವರೆಗೂ ಹೋಗಿದೆ ಎಂದು ಹೇಳಿ ಅಂಕಿಅಂಶ ಸಂಗ್ರಹಿಸಿದ್ದಾರೆ. ತಾವು ಭಾರತದ ಇತರ ಪ್ರಾಂತಗಳನ್ನು ನೋಡಿ. ತಿರುವಾಂಕೂರು ಕೊಚ್ಚಿನಲ್ಲಿ 35 ರಿಂದ 60 ರವರೆಗೂ ಇದೆ. ಇತರ ಪ್ರಾಂತ್ಯಗಳು ಮೈಸೂರಿಗಿಂತ ಉನ್ನತ ಮಟ್ಟದಲ್ಲಿವೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಎಜ್ಯುಕೇಷನ್ ಕಮಿಷನ್ ವರದಿಯ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅದರಲ್ಲಿ

> "The Finance Commission have observed that Mysore of all the States in the Indian Union has the highest share of expenditure on education and the lowest percentage of literacy in the State."

ಹಾಗೆ ಅಂದಾಗ ಇತರರ ಮಟ್ಟದಲ್ಲಿ ಹೋಗುವುದಕ್ಕೆ ಏನೇನು ಮಾಡಬೇಕೆಂಬುದನ್ನು ಸ್ವಲ್ಪ ಅವಲೋಕಿಸಬೇಕಾದದ್ದು ಯಾರು ಸರ್ಕಾರದ ಸೂತ್ರವನ್ನು ಹಿಡಿದುಕೊಂಡಿದ್ದಾರೋ ಅವರ ಮುಖ್ಯ ಕರ್ತವ್ಯ ಎಂದು ನಾನು ಭಾವಿಸುತ್ತೇನೆ. ನಾನು quantitative ವಿಚಾರ ಪ್ರಸ್ತಾಪಿಸುವುದಿಲ್ಲ. Qualitative ವಿಚಾರದಲ್ಲಿ ಹೆಚ್ಚು ನಿಗಾ ಕೊಡಬೇಕೆಂದು ಹೇಳುತ್ತೇನೆ. ಆದರೂ quantitative ವಿಚಾರದಲ್ಲಿ ತಾವು ಸಂಪೂರ್ಣವಾಗಿ ನಮ್ಮ ಕೈಗಳನ್ನು ಕಟ್ಟುವುದಕ್ಕೆ ಆಗುತ್ತದೆಯೋ ಎಂದರೆ ಖಂಡಿತವಾಗಿಯೂ ಇಲ್ಲ. ಎಷ್ಟೋ ಜನ ದೇಶದಲ್ಲಿ ಅವಿದ್ಯಾವಂತರು ಇದ್ದಾರೆ. ಅವರಿಗೆ ಯಾವ ವಿಧವಾದ ಪ್ರೋತ್ಸಾಹ ಕೊಡಬೇಕು ಎಂಬುದನ್ನು ಯೋಚನೆಮಾಡಬೇಕಾಗಿದೆ. ಡಿಪ್ರೆಸ್ ಕ್ಲಾಸ್‌ನವರು 15-20 ಲಕ್ಷ ಜನ ಇದ್ದಾರೆ. Percentage of literacy ತೆಗೆದುಕೊಂಡರೆ ಕೇವಲ ಎರಡು ಪರ್ಸೆಂಟು ಇದ್ದಾರೆ. ನಾನ್ ಡಿಪ್ರೆಸ್ ಕ್ಲಾಸಿನವರು 30 ರಿಂದ 60 ವರೆಗೂ ಇದ್ದಾರೆ. ಒಟ್ಟಿನಲ್ಲಿ ನೋಡಿದಾಗ ಮೈಸೂರು ಸಂಸ್ಥಾನದ percentage of literacy ಶೇಕಡ 13 ಬರುತ್ತದೆ. ಇದು ದೇಶಕ್ಕೆ ಪ್ರಗತಿದಾಯಕವಾದುದೇ, ಇದು ಯಾವ ರೀತಿಯ ಪ್ರಗತಿಯನ್ನು ತೋರಿಸುತ್ತದೆ ಎಂಬುದನ್ನು ಕೇಳುತ್ತೇನೆ. ಈಗಲಾದರೂ I am putting it to you, Sir, even for Vokkaligars, what is the percentage of this class? It is within 6, ದಲಿತವರ್ಗದವರು ಯಾರು ಇದ್ದಾರೋ, ವಿದ್ಯೆ ಇಲ್ಲದೆ ವಿದ್ಯಾರಹಿತರಾಗಿ ಇದ್ದಾರೋ ಅವರಿಗೆ ವಿದ್ಯೆ ದೊರೆಯುವಂತೆ ಆಗಬೇಕು. ಅಷ್ಟೇಹೊರತು ಕೋಮುವಾರು ಭಾವನೆಯಿಂದ ಕೇಳುತ್ತಿದ್ದೇನೆ ಎಂದು ಹೇಳಿ ವ್ಯತ್ಯಾಸವಾಗಿ ಭಾವಿಸಿ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಬಾರದು. ಅವಿದ್ಯಾವಂತರಾಗಿರತಕ್ಕ ಅನುಕೂಲ ಸ್ಥಿತಿಯಲ್ಲಿಲ್ಲದೇ ಇರತಕ್ಕ ಕುಟುಂಬವರ್ಗದವರಿಗೆ, ವ್ಯವಸಾಯದ ಕೂಲಿ, ಇತರ ಕೂಲಿಗಳಿಂದ ಜೀವಿಸತಕ್ಕ ಜನಗಳಿಗೆ, ಪಶುಗಳೋಪಾದಿಯಲ್ಲಿರತಕ್ಕ ಜನಕ್ಕೆ ಏನಾದರೂ ಮಾಡಿ ತಾವು ಹೆಚ್ಚು ಸೌಲಭ್ಯಗಳನ್ನು ಒದಗಿಸಿ ಆ ಜನತೆಯಲ್ಲಿರತಕ್ಕ percentage of literacy ಯನ್ನು ಇತರರ ಮಟ್ಟಕ್ಕೆ ತರದೆ ಈಗಿರತಕ್ಕ percentage ನ್ನೇ ಮುಂದುವರಿಸಿದ ಪಕ್ಷದಲ್ಲಿ ಭಾರತ ದೇಶವನ್ನು ಸೆಕ್ಯುಲರ್ ಸ್ಟೇಟ್ ಎಂದು ಕರೆಯುವುದಕ್ಕೆ ಸಾಧ್ಯವೇ ! ಹಾಗೆ ಹೇಳುವುದಕ್ಕಾಗುತ್ತದೆಯೇ ! ಖಂಡಿತವಾಗಿಯೂ ಇಲ್ಲ. ಇತರ ಸಂಸ್ಥಾನಗಳಿಗಿಂತ ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕಾಗಿ ಹೆಚ್ಚಾಗಿ ಖರ್ಚು ಮಾಡುತ್ತೇವೆ, ಸುಮಾರು 418 ಲಕ್ಷ ರೂಪಾಯಿಗಳನ್ನು ವೆಚ್ಚಮಾಡುತ್ತೇವೆ ಎಂಬ ತತ್ವವನ್ನು ಹೇಳುವಾಗ ಅದರಲ್ಲೇನು ನ್ಯೂನತೆಯಿದೆಯೆಂಬುದನ್ನು ನೋಡಿ ಸರಿಪಡಿಸದಿದ್ದರೆ ಕರ್ತವ್ಯಲೋಪಮಾಡಿದಹಾಗಾಗುತ್ತದೆ. ಇದನ್ನು ಧೈರ್ಯದಿಂದ ಹೇಳುತ್ತೇನೆ. ಯಾರು ಏನುಬೇಕಾದರೂ ತಿಳಿದುಕೊಳ್ಳಲಿ. ಸರ್ಕಾರದವರು ಈ ರೀತಿ ತಕ್ಕ ಉತ್ತೇಜನ ಹಿಂದುಳಿದವರಿಗೆ ನೀಡದಿದ್ದರೆ ಅವರ ಕಾನ್‌ಷನ್ಸ್‌ಗೆ ವಿರೋಧವಾಗಿ ಕೆಲಸಮಾಡಿದಂತಾಗು

ತ್ತದೆ. ಸರ್ಕಾರ ನಮ್ಮ ಮಾತಿನಂತೆ ನಡೆದುಕೊಳ್ಳದಿದ್ದರೆ, ರಾಜ್ಯಾಂಗಕ್ಕನುಗುಣವಾಗಿ ಸಹಾಯವನ್ನೊದಗಿಸದಿದ್ದರೆ ನಮ್ಮ ಜನರಿಗೆ ಶಾಸನಸಭೆಯ ಮಾತಿಗೆ ಬೆಲೆ ಬರಲಿಲ್ಲ, ನೀವೇ ಹೋಗಿ ಸರ್ಕಾರವನ್ನು ಕೊಡಿ ಎಂದು ಕೇಳಿ ಎಂದು ಹೇಳಬೇಕಾದ ಕಾಲ ಬರುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ ಎಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಹಿಂದುಳಿದ ಜನಾಂಗಕ್ಕೆ ಸ್ವಲ್ಪ ಹೆಚ್ಚಾಗಿ ಕೊಟ್ಟು ಅವರನ್ನು ಉತ್ತಮಸ್ಥಿತಿಗೆ ತನ್ನಿ ಎಂದು ನಾವು ಕೇಳುವುದು ಅನುಚಿತವೆ ಅಥವಾ ತಾವು ಹೇಳುವುದು ಅನುಚಿತವೆ ಎಂಬುದನ್ನು ನೋಡಬೇಕು. ನಾವು ಕೇಳುವುದು ಸರಿಯಾಗಿದ್ದರೆ ಕಾನ್ಷನ್ಸ್‌ಗೆ ವಿರುದ್ಧವಾಗಿ ಸರ್ಕಾರ ನಡೆಸಿದಹಾಗಾಗುತ್ತದೆ. ವಿವೇಕಾನಂದರು ಈ ರೀತಿ ಹೇಳಿದ್ದಾರೆ:—

> "So long as the millions live in hunger and ignorance, I hold every man a traitor who, having been educated at their expense, pays not the least to help them."

ಇದನ್ನು ನಾವು ಮನಸ್ಸಿನಲ್ಲಿಟ್ಟು ಮುಂದುವರಿಯಬೇಕು. ಇನ್ನೂ ಮುಂದೆ ಹೀಗೆ ಹೇಳುತ್ತಾರೆ:—

> "Him I call Mahatma whose heart bleeds for the poor; otherwise, he is a Duratma."

ಯಾರು ಬಡವರೋ, ನಿಜವಾಗಿ ಯಾರು ದುಡಿದು ಕಷ್ಟಪಡುವರೋ ಅವರಿಗೆ ಸಹಾಯ ಸಾಕಷ್ಟು ಮಾಡದಿದ್ದರೆ ಖಂಡಿತವಾಗಿಯೂ ತಾವು ನ್ಯಾಯವನ್ನು ದೊರಕಿಸಿಕೊಟ್ಟಹಾಗಾಗುವುದಿಲ್ಲ. ತಾವು ಎಲ್ಲಾ ಬಡವರನ್ನೂ, ಜಾತಿಮತಗಳ ಭೇದವನ್ನೆಣಿಸದೆ ಮೇಲಕ್ಕೆತ್ತಬೇಕು, ಕೆಳಗಿರುವವರನ್ನು ಮೇಲಕ್ಕೆತ್ತುವುದಾಗಿ ರಾಜ್ಯಾಂಗದಲ್ಲಿ ಸಹ ಅವಕಾಶಮಾಡಿ ಕಮಿಟಿ ಮಾಡಿಕೊಂಡು ಅವರಿಗೆ ಸರಿಯಾದ ವ್ಯವಸ್ಥೆ ಮಾಡದಿದ್ದರೆ ಹೇಗೆ? ರಾಜ್ಯಾಂಗಕ್ಕನುಗುಣವಾಗಿ ವರ್ತಿಸದಿದ್ದರೆ, ಸಮಾಜದಲ್ಲಿರುವ ಬಡವರು ಕೆಳಮಟ್ಟಕ್ಕೆ ಹೋಗಿ ಬಲ್ಲಿದರು ಮೇಲ್ಮಟ್ಟಕ್ಕೆ ಬಂದರೆ ಅದು ಸರಿಯೆ?

> "Irrespective of the caste or creed to which he belongs."

ಇದನ್ನು ವಿದ್ಯಾಭ್ಯಾಸದ ಬಾಬಿನಲ್ಲಿ ಮಾತ್ರವಲ್ಲದೆ ಎಲ್ಲಾಬಾಬುಗಳಲ್ಲೂ ಗಮನಿಸಿ ತಕ್ಕ ಪ್ರೋತ್ಸಾಹ ನೀಡಬೇಕು. ಈ ಖೋತಾ ನಿರ್ಣಯದಲ್ಲಿರುವ ರೀತಿಯಲ್ಲಿ ಮಾಡದೆ ಇದ್ದಪಕ್ಷದಲ್ಲಿ, ಏನಾದರೂ 'ಹಣವಿಲ್ಲ, I am sorry my heart is with you but head is against' ಎಂದು ಹೇಳುವುದಾದರೆ ಅದು ನಿಜವಾಗಿಯೂ ನ್ಯಾಯವಲ್ಲ. ಎಷ್ಟು ಹೇಳಿದರೂ ವಿದ್ಯಾಭ್ಯಾಸದ ಬಾಬಿಗೆ ಈಸಲವೂ ಬಡ್ಜೆಟ್ಟಿನಲ್ಲಿ 4 ಲಕ್ಷವಾದರೂ ಹೆಚ್ಚಾಗಿ ಹಿಂದುಳಿದ ಪಂಗಡದವರಿಗೆ ಮತ್ತು ನಿಮ್ಮವರ್ಗದವರಿಗೆ ಸಹಾಯ ನೀಡಲು ಕೊಡದೆ 5 ಲಕ್ಷ ರೂಪಾಯಿಗಳನ್ನು ಮಾತ್ರ ವಿದಾರ್ಥಿವೇತನಕ್ಕಾಗಿ ಕೊಟ್ಟಿದ್ದಾರೆ. ಬೇಕಾದಷ್ಟು ಇನ್‌ಡೈರೆಕ್ಟ್ ಟ್ಯಾಕ್ಸ್, ಡೈರೆಕ್ಟ್ ಟ್ಯಾಕ್ಸ್ ಹಾಕುತ್ತಿದ್ದಾರೆ, ಸೇಲ್ಸ್ ಟ್ಯಾಕ್ಸ್ ಹೆಚ್ಚುಮಾಡಿದ್ದಾರೆ. ಈ ದಿವಸ ಬಟ್ಟೆಗಳ ಮೇಲೆ ಸಿನಿಮಾಗಳ ಮೇಲೆ ತೆರಿಗೆ ಹೆಚ್ಚಾಗಿ ಬರುತ್ತಿದೆ. ಆದರೆ ದೇಶಸೇವೆ ಮಾಡುವ, ದೇಶಕ್ಕೆ ಬೆನ್ನುಮೂಳೆಯೆಂದು ಹೇಳುವ ಬಡವರಿಗೆ, ವ್ಯವಸಾಯ, ಕೈಗಾರಿಕೆ ಮುಂತಾದ ಬಾಬುಗಳಲ್ಲಿ ದುಡಿದು ಬೆವರು ಸುರಿಸುತ್ತಿರುವ ಹಿಂದುಳಿದ ಜನಾಂಗಕ್ಕೆ ಅನುಕೂಲ ಸಾಕಾದಷ್ಟು ದೊರಕಿಸಿಕೊಡದೆ ಅವರನ್ನು ದೂರಮಾಡಿ ಕಾಡಿನಲ್ಲಿರುವ ಮೃಗಗಳೋಪಾದಿಯಲ್ಲಿ ಕಾಣುವುದು ಸರಿಯೇ? ಖಂಡಿತ ಇದು ಧರ್ಮವಲ್ಲ, ಜನ ಮೆಚ್ಚುವುದಿಲ್ಲ. ಕೆಳಗಿರುವವರನ್ನು, ಹಿಂದುಳಿದವರನ್ನು ಮುಂದಕ್ಕೆ ತರಲು ಈಗ ಅನುಸರಿಸುತ್ತಿರುವ ನೀತಿ ಸರಿಯಾಗಿಲ್ಲ, ಮಾರ್ಗ ಸರಿಯಾಗಿಲ್ಲ. ಕೆಳಗಿರುವವರನ್ನು ಮುಂದುವರಿದಿರುವವರ ಮಟ್ಟಕ್ಕೆ ತರಬೇಕಾದದ್ದು ಉಚಿತ, ಇದಕ್ಕೆ ಒಂದು ಮಿತಿಯಿದೆ ಒಂದು ಸರಿಯಾದ ನೀತಿಯನ್ನನುಸರಿಸಿ, ಒಂದಲ್ಲ ಹತ್ತು ವಿಧಗಳಲ್ಲಿ ಯೋಚನೆಮಾಡಿ ಇದಕ್ಕೆ ಅವಕಾಶ ಮಾಡಬೇಕು. ನಾನು ಹೇಳುವ ಮಾತಿನಲ್ಲಿ ಏನಾದರೂ ತಪ್ಪಿದೆಯೆಂದು ಮಾನ್ಯ ಸದಸ್ಯರು ಯಾರಾದರೂ ಹೇಳುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ಈ ಅಧಿವೇಶನದಲ್ಲಿ 791ನೆಯ ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರಬೇಕಾಗಿದೆ. ಕಳೆದ ಐದು ವರ್ಷಗಳಲ್ಲಿ ಸ್ಕಾಲರ್‌ಷಿಪ್ಪುಗಳನ್ನು ಎಷ್ಟು ಮಂದಿ ಡೆಪ್ರೆಸ್ಡ್ ಕ್ಲಾಸಿನವರಿಗೆ ಕೊಟ್ಟಿದ್ದಾರೆಂಬ ಬಗ್ಗೆ ಅಂಕಿ ಅಂಶಗಳನ್ನು ಈ ಸಂದರ್ಭದಲ್ಲಿ ನೋಡಬೇಕಾಗಿದೆ. ಹೈಸ್ಕೂಲುಗಳಲ್ಲಿ 1948-49 ನೆಯ ಸಾಲಿನಲ್ಲಿ 1,019 ಅರ್ಜಿಗಳು ಬಂದಿದ್ದಕ್ಕೆ 487 ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಟ್ಟರು, 1949-50ರಲ್ಲಿ 1,449 ಅರ್ಜಿಗಳು ಬಂದಾಗಲೂ 487 ಮಂದಿಗೆ ಮಾತ್ರ ಕೊಟ್ಟರು, 1950-51ರಲ್ಲಿ 1,449 ಅರ್ಜಿಗಳು ಬಂದಾಗ 567 ಜನರಿಗೆ ಕೊಟ್ಟರು, 1951-52ರಲ್ಲಿ 1,597 ವಿದಾರ್ಥಿಗಳು ಅರ್ಜಿ ಕೊಟ್ಟಾಗಲೂ 567 ಮಂದಿಗೆ ಮಾತ್ರ ಕೊಟ್ಟರು, 1952-53ರಲ್ಲಿ ಅರ್ಜಿಗಳ ಸಂಖ್ಯೆ ಇನ್ನೂ ಹೆಚ್ಚಿ 1,673 ಆದರೂ 567 ಜನರಿಗೆ ಮಾತ್ರ ಕೊಟ್ಟರು. ಇನ್ನು ಮಿಡ್ಲ್ ಸ್ಕೂಲುಗಳಿಗೆ ಒದಗಿಸಲಾದ ಸ್ಕಾಲರ್‌ಷಿಪ್ಪುಗಳ ಸಂಖ್ಯೆ ನೋಡೋಣ. 1948-49ರಲ್ಲಿ ಬಂದ ಅರ್ಜಿಗಳ ಸಂಖ್ಯೆ 3,282, ಒದಗಿಸಲಾದ ಸ್ಕಾಲರ್‌ಷಿಪ್ಪುಗಳ ಸಂಖ್ಯೆ 799; 1949-50ರಲ್ಲಿ ಅರ್ಜಿಗಳ ಸಂಖ್ಯೆ ಹೆಚ್ಚಿ 4,304 ಆದರೂ 799 ಮಂದಿಗೆ ಮಾತ್ರ ಕೊಟ್ಟರು; 1950-51ರಲ್ಲಿ 4,409 ಅರ್ಜಿ ಬಂದು 899 ಜನರಿಗೆ ಕೊಟ್ಟರು; 1951-52ರಲ್ಲಿ 4,759 ಅರ್ಜಿ ಬಂದಾಗಲೂ 899 ವಿದ್ಯಾರ್ಥಿಗಳಿಗೆ ಮಾತ್ರ ಕೊಟ್ಟರು; 1952-53 ನೆಯ ಸಾಲಿನಲ್ಲಿ 4,493 ಅರ್ಜಿ ಬಂತು, 899 ಜನರಿಗೆ ಕೊಟ್ಟರು. ಅರ್ಜಿಗಳ ಸಂಖ್ಯೆ ಕ್ರಮೇಣ ಜಾಸ್ತಿಯಾಗುತ್ತಾ ಬಂದರೂ ಸ್ಕಾಲರ್‌ಷಿಪ್ಪುಗಳ ಸಂಖ್ಯೆ ಅದಕ್ಕನುಗುಣವಾಗಿ ಹೆಚ್ಚಲಿಲ್ಲ. ಹೀಗಾದರೂ ಪ್ರಾಥಮಿಕ ವಿದ್ಯಾಭ್ಯಾಸ, ಮಾಧ್ಯಮಿಕ ವಿದ್ಯಾಭ್ಯಾಸ ಪೂರೈಸಿ ಹೈಸ್ಕೂಲು ಕಾಲೇಜುಗಳಿಗೆ ಬಂದು ಓದುವುದು ಹೇಗೆ? ಸಾಕಾದಷ್ಟು ಪ್ರೋತ್ಸಾಹ ಹಿಂದುಳಿದ ಬಡ ಮಕ್ಕಳಿಗೆ ಹೈಸ್ಕೂಲು ಕಾಲೇಜುಗಳಲ್ಲಿ ಸಿಕ್ಕದಿದ್ದರೆ ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಿಲ್ಲದೆ ಹಿಂದಕ್ಕೆ ಹೋಗುತ್ತಾರೆ. ಆಗ ಅವರಿಗಾಗಿ ಖರ್ಚುಮಾಡುವ ಹಣ ವಿದ್ಯಾಭ್ಯಾಸದ ಬಾಬಿನಲ್ಲಿ ಎಷ್ಟು ನಿರರ್ಥಕವಾಗುತ್ತದೆಂಬುದನ್ನು ಯೋಚನೆಮಾಡಿದ್ದೀರಾ? ಇದಕ್ಕಾಗಿ ಹೈಸ್ಕೂಲು ಕಾಲೇಜು ವಿದ್ಯಾಭ್ಯಾಸ ಮುಗಿಯುವವರೆಗೆ ಎಲ್ಲಾ ತರಗತಿಗಳಲ್ಲೂ ಡಿಪ್ರೆಸ್ಡ್ ಕ್ಲಾಸಿನವರಿಗೂ ಮತ್ತು ಬ್ಯಾಕ್‌ವರ್ಡ್ ಕ್ಲಾಸಿನವರಿಗೂ ಹೆಚ್ಚಾಗಿ ಸ್ಕಾಲರ್‌ಷಿಪ್ಪುಗಳನ್ನು ಕೊಡಬೇಕು ಮತ್ತು ಇತರ ಸೌಕರ್ಯಗಳನ್ನೂ ಒದಗಿಸಬೇಕು. ಈಗಿರುವ ಸ್ಕಾಲರ್‌ಷಿಪ್ಪುಗಳ ಸಂಖ್ಯೆಯನ್ನು ಶೇಕಡ ನೂರರಷ್ಟು ಹೆಚ್ಚಿಸಬೇಕು. ನಿರ್ಣಯದಲ್ಲಿ ಕೇಳಿರುಹಾಗೆ ಈಗಿರುವುದನ್ನು ಎರಡರಷ್ಟಾದರೂ ಮಾಡಬೇಕು. ಹಿಂದೆಯೂ ಸಹ ಬ್ಯಾಕ್‌ವರ್ಡ್

(ಶ್ರೀ ಎಂ. ಮಾದಯ್ಯ.)

ಕ್ಲಾಸ್ ಮತ್ತು ಡಿಪ್ರೆಸ್ಡ್ ಕ್ಲಾಸು ಪಂಗಡದವರಿಗೆ ಕೊಟ್ಟಿರುವ ವಿದ್ಯಾರ್ಥಿವೇತನಗಳ ತಪಶೀಲನ್ನು ನಾನು ತಿಳಿಸಿದ್ದೇನೆ. ಹಿಂದುಳಿದ ಪಂಗಡಗಳವರಿಂದ ವಿದ್ಯಾರ್ಥಿವೇತನಕ್ಕಾಗಿ ಈ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳಿಂದಲೂ 10,761 ಅರ್ಜಿಗಳು ಬಂದಿವೆ, ನಿಮ್ನ ತರಗತಿಗಳವರಿಂದ 1,397 ಅರ್ಜಿಗಳು ಬಂದಿವೆ. ಅಲಾಟ್‌ಮೆಂಟ್ ಡಿಪ್ರೆಸ್ಡ್ ಕ್ಲಾಸಿಗೆ 42,525 ರೂಪಾಯಿಗಳನ್ನೂ, ಬ್ಯಾಕ್‌ವರ್ಡ್ ಕ್ಲಾಸಿಗೆ 1,23,950 ರೂಪಾಯಿಗಳನ್ನೂ ಕೊಟ್ಟಿದ್ದಾರೆ; ಡಿಪ್ರೆಸ್ಟ್ ಕ್ಲಾಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಸೇರಿ 2,066 ಮಂದಿಗೆ ವಿದ್ಯಾರ್ಥಿವೇತನಗಳನ್ನೊದಗಿಸಿದ್ದಾರೆ. ಇದನ್ನು ಸರಿಯಾಗಿ ನೋಡಿದರೆ ಶೇಕಡ 10 ಅಥವಾ 15 ರಷ್ಟು ಮಂದಿಗೆ ಮಾತ್ರ ಒದಗಿಸಿದಂತಾಗಿದೆ. ಇನ್ನೂ ಮುಕ್ಕಾಲುಭಾಗ ಜನರಿಗಿಲ್ಲ. ಆದ್ದರಿಂದ ಅರ್ಜಿ ಹಾಕಿರುವವರಲ್ಲಿ ಅನುಕೂಲಸ್ಥರೆಷ್ಟು ಜನವೆಂಬುದನ್ನು ನೋಡಿ ಅಂಥವರ ಅರ್ಜಿಗಳನ್ನು ಸ್ಥಳೀಯ ಆಫೀಸರುಗಳಿಗೆ ಕಳುಹಿಸಿ ತನಿಖೆಮಾಡಿನೋಡಿ ನಿರ್ಗತಿಕರಿಗೆ, ನಿಜವಾಗಿಯೂ ಅರ್ಹರಾದವರಿಗೆ ಹಿಂದುಮುಂದೆ ನೋಡದೆ ಕೊಡಬೇಕು. ಹಾಗೆ ಕೊಡದಿದ್ದ ಪಕ್ಷದಲ್ಲಿ ಖಂಡಿತ ಅನ್ಯಾಯವಾಗುತ್ತದೆ. ಈ ಸರ್ಕಾರ ಬಂದ ಮೇಲೆ ನಾವು ಮೂರನೆಯ ಬಡ್ಜೆಟ್ಟನ್ನು ಅಂಗೀಕಾರ ಮಾಡುತ್ತಿದ್ದೇವೆ. ಈ ಬಡ್ಜೆಟ್ಟಿನಲ್ಲಿ ಈಸಲವು ಡಿಪ್ರೆಸ್ಡ್ ಕ್ಲಾಸು ಮತ್ತು ಬ್ಯಾಕ್‌ವರ್ಡ್ ಕ್ಲಾಸು ಜನರಿಗೆ ಪ್ರೈಮರಿ, ಮಿಡ್ಲ್ ಮತ್ತು ಹೈ ಸ್ಕೂಲುಗಳಲ್ಲಿ ಮತ್ತು ಕಾಲೇಜುಗಳಲ್ಲಿ ಎಷ್ಟೆಷ್ಟು ಹಣ ಕೊಟ್ಟಿದೆಯೆಂಬುದನ್ನು ದಯವಿಟ್ಟು ಹೇಳಿ. ಅದನ್ನು ನೋಡಿದರೆ ತಮ್ಮ ಪಾಲಿಸಿ ಪ್ರೋಗ್ರೆಸಿವ್ ಆಗಿದೆಯೆ, ಉದಾರನೀತಿಯನ್ನು ಅನುಸರಿಸಿದ್ದೀರಾ ಎಂಬುದು ವ್ಯಕ್ತವಾಗುತ್ತದೆ. ಒಂದು ಕಾಸೂ ಹೆಚ್ಚಿಸಿಲ್ಲ. ಏಕೆ ಹೆಚ್ಚಾಗಿ ಕೊಡಬಾರದು ! ಈಸಲವಾದರೂ ಜಾಸ್ತಿಯಾಗಿ ಒದಗಿಸಿದ್ದೀರಾ ? ಏಕೆ 2 ಲಕ್ಷ ಹೆಚ್ಚಿಸಬಾರದು ! ಈಗಿರುವ ಹಣವನ್ನು ದ್ವಿಗುಣಮಾಡಿದರೆ ಒಂದೆರಡು ಲಕ್ಷ ಜಾಸ್ತಿ ಕೊಟ್ಟಹಾಗಾಗುತ್ತದೆ. ಸುಮಾರು 5 ಲಕ್ಷ ರೂಪಾಯಿಗಳಾದರೆ ಸಾಕು. ಇದಕ್ಕೇಕೆ ಹಿಂದುಮುಂದೆ ನೋಡುತ್ತೀರಿ ? ಡಿಪ್ರೆಸ್ಡ್ ಕ್ಲಾಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ವಿದ್ಯಾರ್ಥಿವೇತನಕ್ಕೆ ಎಲ್ಲಾ ಗ್ರೇಡಿನಲ್ಲೂ ಇರುವ ಅಲಾಟ್‌ಮೆಂಟ್ ಜಾಸ್ತಿ ಮಾಡಬೇಕು. ಇದು ತಮ್ಮ ಮುಖ್ಯವಾದ ಕರ್ತವ್ಯ. ಇದಾಗದಿದ್ದರೆ ಖಂಡಿತವಾಗಿಯೂ ಜನತೆ ಯೋಚನೆ ಮಾಡಬೇಕಾಗುತ್ತದೆ, ಬೇರೆ ರೀತಿಯಲ್ಲಿ ಸರ್ಕಾರ ಈ ಕೆಲಸಮಾಡುವಂತೆ ಮಾಡಬೇಕಾಗುತ್ತದೆ. ಇದಕ್ಕೆ ಅವಕಾಶ ಕೊಡಬೇಡಿ ಎಂದು ವಿನಯಪೂರ್ವಕವಾಗಿ ಹೇಳಿ ಈ ಖೋತಾಸೂಚನೆಯನ್ನು ಸಭೆಯಮುಂದಿಟ್ಟು ಮಾನ್ಯ ಸದಸ್ಯರೆಲ್ಲರೂ ಸಹ ಈ ಸೂಚನೆಯ ಮೇಲೆ ನಾನು ಹೇಳುವುದನ್ನು ಕೇಳಿ ಎಲ್ಲಾ ವಿಷಯಗಳಿಗೂ ಸಂಪೂರ್ಣ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—Sri Madiah, if you read the question No. 791 that was answered this morning, you will find out from the figures available there that in 1950-51, 80 scholarships were increased in High Schools and in Middle Schools 100 scholarships were increased. The number of applications received in 1952-53 as compared with the number received in 1950-51 shows only 84 in excess for Middle Schools. Are not Government doing something in this direction ?

ಶ್ರೀ ಎಂ. ಮಾದಯ್ಯ.—ಹೈಸ್ಕೂಲು ಮತ್ತು ಮಿಡ್ಲ್ ಸ್ಕೂಲುಗಳಿಗೆ 1950-51 ರಿಂದ ಒಂದೇ ಸಮನಾಗಿದೆಯೆಂದು ಹೇಳಿದೆ.

Mr. SPEAKER.—From the figures you can see that 80 scholarships for High Schools and 100 scholarships for Middle Schools have been increased. I do not mean to say that more scholarships should not be given; do not mistake me. You must, at the same time, also appreciate the action of Government.

ಶ್ರೀ ಎಂ. ಮಾದಯ್ಯ.—ಅಲಾಟ್‌ಮೆಂಟ್ 1948-49ರಲ್ಲಿ ಹೈಸ್ಕೂಲಿಗೆ 487 ಇದೆ, ಮಿಡ್ಲ್ ಸ್ಕೂಲಿಗೆ 799 ಇದೆ; ಅದರ ಮುಂದಿನ ವರ್ಷವೂ ಇಷ್ಟೇ ಇದೆ.

Mr. SPEAKER.—Number of applications also are only 84 more.

ಶ್ರೀ ಎಂ ಮಾದಯ್ಯ.—ಈಗ 100 ವಿದ್ಯಾರ್ಥಿವೇತನ ಹೆಚ್ಚಾಗಿದೆಯೆಂದು ಹೇಳಿದರೂ 1950-51 ರಿಂದ 1953-54 ರವರೆಗೂ ಬಡ್ಜೆಟ್ ಪ್ರಪೋಸಲ್ 3-4 ವರ್ಷಗಳಿಂದ ಒಂದೇ ಸಮನಾಗಿದೆಯೆಂದು ತೋರಿಸಲು ನಾನು ಅಷ್ಟು ಹೇಳಿದೆ. ಅದರಲ್ಲೂ ಅಲಾಟ್‌ಮೆಂಟಿಗೂ ಅರ್ಜಿಗಳು ಬಂದಿರುವುದಕ್ಕೂ ಹೋಲಿಸಿ ಎಷ್ಟನೆಯ ಒಂದು ಭಾಗ ಬರುತ್ತದೆ ಯೆಂಬುದನ್ನು ನೋಡಬೇಕು. ಈಗಲೆ 400 ಅಲಾಟ್‌ಮೆಂಟಿದ್ದು 4 ಸಾವಿರ ಅರ್ಜಿ ಬಂದರೆ ಎಷ್ಟು ಭಾಗ ಬರುತ್ತದೆಯೆಂದು ನೋಡಬೇಕು. ಅರ್ಜಿಗಳ ಸಂಖ್ಯೆ ಮತ್ತು ಒದಗಿಸಿರುವ ಹಣ ಹೋಲಿಸಿದರೆ ಶೇಕಡ 15ರಿಂದ 20ರವರೆಗೆ ದೊರಕಿದಂತಾಗುತ್ತದೆ.

ಈ ಸ್ಕಾಲರ್‌ಷಿಪ್ ಹಂಚಿಕೆಯಲ್ಲಿ ಅಪ್ಲಿಕೇಷನ್‌ಗಳು ಎಷ್ಟು ಬರುತ್ತವೆ, allotment ಎಷ್ಟಿದೆ, ಯಾವ ಯಾವ ಕೋಮಿಗೆ ಎಷ್ಟು ಹಂಚಿಕೆ ಮಾಡಿದರೆ ರಾಜ್ಯಾಂಗ ತತ್ವಕ್ಕೆ ಅನುಸಾರವಾಗಿ ನಡೆದಂತಾಗುತ್ತದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಅದಕ್ಕನುಸಾರವಾಗಿ ವರ್ತಿಸಬೇಕಾದುದು ಸರ್ಕಾರದ ಕರ್ತವ್ಯ.

3 P.M.

***Sri A. G. RAMACHANDRA RAO.**—I may correct the Hon'ble Member by giving some factual information. 1949-50ರಲ್ಲಿ 480 ಜನರಿಗೆ ಸ್ಕಾಲರ್‌ಷಿಪ್ ಕೊಟ್ಟಿದೆ. ಆದರೆ ಬಂದ ಅಪ್ಲಿಕೇಷನ್ ಸಂಖ್ಯೆ 1,449. ಅದರ ಮೂರನೆಯ ವರ್ಷ 50 ಅಪ್ಲಿಕೇಷನ್‌ಗಳು ಜಾಸ್ತಿಯಾಗಿವೆ. ಆದರೆ 80 ಜನರಿಗೆ ಹೆಚ್ಚಾಗಿ ಕೊಟ್ಟಿದೆಯೆಂಬುದು ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಅದೇ 1952-53ನೆಯ ವರ್ಷದಲ್ಲಿ 1,673 ಅಪ್ಲಿಕೇಷನ್‌ಗಳು ಬಂದಿವೆ. ಆ ವರ್ಷ 83 ಜನರಿಗೆ ಜಾಸ್ತಿ ಕೊಟ್ಟಿದೆ. ಇದೇ ರೀತಿ ಲೆಕ್ಕ ಹಾಕಿದರೆ number of applications received and number of

scholarships granted—ಇವುಗಳನ್ನು ನೋಡದರೆ ಹೆಚ್ಚು ಪ್ರಮಾಣದಲ್ಲಿ ಕೊಟ್ಟಿರುವುದು ವ್ಯಕ್ತವಾಗುತ್ತದೆ.

ಶ್ರೀ ಎಂ. ಮಾದಯ್ಯ.—ಬಂದಿರತಕ್ಕ ಅಪ್ಲಿಕೇಷನ್ ಸಂಖ್ಯೆ ಎಷ್ಟು, ಸ್ಕಾಲರ್‌ಷಿಪ್ allotment ಎಷ್ಟು ಎಂಬುದನ್ನು ಪರಿಶೀಲಿಸಿ, ತಾರತಮ್ಯವನ್ನು ಗಣನೆಗೆ ತೆಗೆದುಕೊಂಡುದೇ ಆದರೆ, ಈ ಸ್ಕಾಲರ್‌ಷಿಪ್ ಪ್ರತಿ ವರ್ಷವೂ ಅಷ್ಟಾಗಿ ಹೆಚ್ಚಾಗಿಲ್ಲವೆಂಬುದು ಕಂಡು ಬರುತ್ತದೆ. ರಾಜ್ಯಾಂಗದ 46ನೆಯ ವಿಧಿಯಲ್ಲಿ weaker sectionನ್ನಗೆ ಯಾವ ರೀತಿ protection ಕೊಡಬೇಕೆಂಬುಡನ್ನು ಸ್ಪಷ್ಟವಾಗಿ ಹೇಳಿದೆ :

> "The State shall promote with special care......"

Compare the number of applications received and the number granted. Any greater ratio ? I invite the Hon'ble Minister to refer to article 46 of the Constitution. It refers to 'weaker sections.'

Sri A. G. RAMACHANDRA RAO.—Such cases we take note of.

Sri M. MADIAH.—It says—

> "The State shall promote with special care the educational and economic interests of the weaker sections of the people, and, in particular, of the Scheduled Castes and the Scheduled Tribes, and shall protect them from social injustice and all forms of exploitation."

What is the special care that the Government have taken according to the above article ?

Sri A. G. RAMACHANDRA RAO.—Every student from the first class to the highest class at present is given freeship. That is the special concession given.

Sri M. MADIAH.—After the Constitution came into force, I know that the public at large and the Hon'ble Members of the Legislature ever since the Legislature came into being in Mysore, are very kind to the Scheduled Castes.

Sri A. G. RAMACHANDRA RAO.—Thank you.

Sri M. MADIAH.—I do not deny that. But now, after the Constitution came into force, I do not know what steps are taken by the Government which will go to show that they have taken special care ?

Sri A. G. RAMACHANDRA RAO.—It is the good luck of Mysore people that long before the Constitution came, Mysore implemented the very idea embodied in the Constitution. It is the good luck of the people in Mysore.

Sri M. MADIAH.—It is said there—

> "and shall protect them from social injustice and all forms of exploitation."

ಈ protection ವಿಚಾರದಲ್ಲಿ ಸರ್ಕಾರದರು ಕೊಟ್ಟಿರುವ special care ಏನು ಎಂಬುದನ್ನು ನೋಡಬೇಕಾಗಿದೆ. ಈ ವಿಚಾರದಲ್ಲಿ ಬೇಲಿ ಎದ್ದು ಹೊಲ ಮೇಯುದಂತೆ ನೋಡಿಕೊಳ್ಳದಿದ್ದರೆ ಆ ಹೊಲದ ಫಸಲಿನ ಯೋಗಕ್ಷೇಮ ನೋಡತಕ್ಕವರು ಯಾರು ? ರಾಜ್ಯಾಂಗದ 338ನೆಯ ವಿಧಿಯಲ್ಲಿ "There shall be a special officer for the Scheduled Tribes................" Next, it is said that there shall be a special officer appointed for the Scheduled Castes and Tribes to be appointed by the President and it shall be the duty of the special officer to investigate all matters relating to the Scheduled Castes and Tribes under the Constitution and report to the President upon the working of the safeguards. A special officer has been appointed to examine the adequacy or otherwise of the facilities given. I do not know . . . .

Sri A. G. RAMACHANDRA RAO.—May I bring to the notice of the Chair that that subject is a little foreign to the subject on hand ? We are speaking of the constitution of special officers, what provisions relating to then are implemented and what have not been implemented. That is not the subject under discussion.

Sri M. MADIAH.—And then, Sir,—

> "In this article, references to the Scheduled Castes and Scheduled Tribes shall be construed as including references to such other backward classes as the President may, on receipt of the report of a Commission appointed under clause (1) of article 340, by order specify and also the Anglo-Indian community."

ನಾನು ತಿಳಿದಿರುವ ಮಟ್ಟಿಗೆ weaker section ಎಂದರೆ ಡಿಪ್ರೆಸ್ಡ್‌ಕ್ಲಾಸ್‌ನವರೆಂದೇ ಅಲ್ಲ. ಯಾರು ಆರ್ಥಿಕವಾಗಿಯೂ ಮತ್ತು ಸಾಮಾಜಿಕವಾಗಿಯೂ (economically and socially) ಹಿಂದುಳಿದಿರುತ್ತಾರೋ ಅವರೆಲ್ಲರೂ weaker section ಎಂದೇ ಪರಿಗಣಿಸಲ್ಪಡಬೇಕು. ಆದುದರಿಂದ Special Officer for Depressed Classes ಇತರ backward classes ವಿಚಾರವನ್ನೂ ಗಣನೆಗೆ ತೆಗೆದುಕೊಳ್ಳ

(SRI M. MADIAH.)

ಬೇಕೆಂದು ನನ್ನ ಸೂಚನೆ. ನಮ್ಮ ಮೈಸೂರು ಸಂಸ್ಥಾನದ ವಿಚಾರದಲ್ಲಿ ಹೊರಗಿನವರು ಬಹಳ ಒಳ್ಳೆಯ-ಅಭಿಪ್ರಾಯವನ್ನು ಇಟ್ಟು ಕೊಂಡಿರುತ್ತಾರೆ. ಅದನ್ನ keep up ಮಾಡಬೇಕೆಂದು ಸರ್ಕಾರದವರನ್ನು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. Weaker Section ನವರಿಗೆ ರಾಜ್ಯಾಂಗದಲ್ಲಿ ವಿಧಿಸಲ್ಪಟ್ಟಿರುವಂತೆ adequate safeguard ಇಲ್ಲವೆಂಬ ಶಂಕೆಗೆ ಮಾತ್ರ ಅವಕಾಶ ಕೊಡಬಾರದೆಂದು ಅವರಲ್ಲಿ ನನ್ನ ಸವಿನಯ ಪ್ರಾರ್ಥನೆ.

ಅಧ್ಯಕ್ಷರು.—ಹೆಚ್ಚಾಗಿ ಕೇಳುವುದಿದ್ದರೆ ಕೇಳಿ, ಹಾಗಿಲ್ಲದೆ ಸರ್ಕಾರದವರು ಏನೂ ಸೌಕರ್ಯ ಒದಗಿಸಿಲ್ಲವೆಂದು ಹೇಳಿದರೆ ಅದು ಸರಿಯಲ್ಲ.

Mr. SPEAKER.—Cut motion moved :

> " That the demand be reduced by Rs. 100. "

The House will now rise for lunch and meet again at 3-30.

The House adjourned for Lunch at Eight Minutes past Three of the Clock and reassembled at Thirty-eight Minutes past Three of the Clock.

[MR. SPEAKER in the Chair]

Statement by Sri Mulka Govinda Reddy.

Sri Mulka GOVINDA REDDY (Chitaldrug).—Sir, I request you to kindly permit me to make a statement in order to clear any possible misapprehension resulting from the statement of the Chief Minister the other day that I tried to influence him and that he did not yield to it. In view of your ruling given earlier, precluding the question being raised now, it has become necessary to make this statement to clear such misapprehensions.

It may be that in my capacity as a member of the Legislature, I meet the Chief Minister or other Ministers to urge for consideration of certain legitimate grievances of the public or a section of them, as I consider that it is my duty to do so. But I can assure you, Sir, and through you the members, that I never approached the Chief Minister on behalf of any officer in respect of revision of age.

Thank you, Sir.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ವಿಚಾರಗಳನ್ನು ತಿಳಿಸಲಿಚ್ಛಿಸುತ್ತೇನೆ. ನನಗೆ ಖಾಯಿಲೆಯಾಗಿದ್ದರೂ ಸಹ ಈ ವಿಚಾರದ ಮೇಲೆ ಒಂದೆರಡು ಅಂಶಗಳನ್ನು ತಿಳಿಸಬೇಕೆಂದು ಮನಸ್ಸು ಬಾಧಿಸುತ್ತಿದೆ.

ಮೈಸೂರು ಸಂಸ್ಥಾನದಲ್ಲಿ ಬೋರ್ಡಿಂಗ್ ಹೋಂಗಳಿಗೆ ಎಷ್ಟು ವರ್ಷಗಳಿಂದ ಪ್ರಸ್ತಾಪಿಸುತ್ತಿದ್ದರೂ ಆಗಿನಿಂದಲೂ ಒಂದೇ ರೀತಿ ಗ್ರಾಂಟು ಕೊಡುತ್ತಿದ್ದಾರೆ. ಹಿಂದೆ ಒಂದು ರೂಪಾಯಿಗೆ ಹತ್ತು ಸೇರು ಅಕ್ಕಿ, ಹದಿನಾಲ್ಕು ಸೇರು ರಾಗಿ ಇತ್ತು. ಈಗ ಒಂದು ರೂಪಾಯಿಗೆ ಒಂದೂವರೆ ಸೇರು ಅಕ್ಕಿ, ಮೂರು ಸೇರು ರಾಗಿ ಇದೆ. ಈಗಲೂ ಸಹ ಅದೇ ಗ್ರಾಂಟನ್ನೇ ಕೊಡುತ್ತಿದ್ದಾರೆ. ಜೈಲಿನಲ್ಲಿ ಕಠಿಣಸಜಾ ಅನುಭವಿಸುತ್ತಿರುವವರಿಗಾದರೂ ಹೆಚ್ಚಾಗಿ ದೊರಕುತ್ತಿದೆ. ಅದೇ ಬೋರ್ಡಿಂಗ್ ಹೋಂಗಳಲ್ಲಿರುವ ಮಕ್ಕಳು ಅನುಭವಿಸುತ್ತಿರುವ ಕಷ್ಟ ಹೇಳತೀರದು. ಇದೇ ವಿಚಾರದಲ್ಲಿ ಪಾಲಿಸಿ ಸಮಿತಿಯಲ್ಲಿ ಸಹ ನಾವು ಒಂದು ನಿರ್ಣಯ ಮಾಡಿ ಅದನ್ನು ಸರ್ಕಾರದವರಿಗೆ ಕಳುಹಿಸಿದ್ದೇವೆ. ಅದು ಏನಾಯಿತೋ ಗೊತ್ತಾಗಲಿಲ್ಲ; ಮತ್ತು ಸಂಸ್ಥಾನಾಮಳೆ ಹಿಂದುಳಿದ ಪಂಗಡದವರ ಏಳಿಗೆಯ ವಿಚಾರದಲ್ಲಿ ಡೈರೆಕ್ಟರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನಡೆದು ಅದರಲ್ಲಿ ನಿರ್ಣಯವೊಂದನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದೆ. ಅದರ ವಿಚಾರ ಸಹ ಗೊತ್ತಿಲ್ಲ. ಈದಿನ ನಮ್ಮ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ನಾಲ್ಕುಕೋಟಿ ರೂಪಾಯಿಗಳನ್ನು ಒದಗಿಸುತ್ತಾರೆ. ಹೀಗೆ ವರ್ಷೇ ವರ್ಷೇ ಈ ಬಗ್ಗೆ ಹಣವನ್ನು ಜಾಸ್ತಿಯಾಗಿ ಒದಗಿಸುತ್ತಿದ್ದರೂ ಸಹ ಅದು ಹೇಗೆ ಖರ್ಚಾಗುತ್ತಿದೆಯೆಂಬ ಬಗ್ಗೆ ಶಂಕೆ ಉಂಟಾಗಲು ಅವಕಾಶವಾಗಿದೆ. ಹೈಸ್ಕೂಲು ಮತ್ತು ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹೆಚ್ಚಿಸಬೇಕು, ಹರಿಜನರಿಗೆ ಮಾತ್ರವಲ್ಲದೆ ಇತರ ಹಿಂದುಳಿದ ಕೋಮಿನವರಿಗೂ ಈ ವಿಚಾರದಲ್ಲಿ ಹೆಚ್ಚಿನ ಪರಿಹಾರ ದೊರಕಬೇಕು ಎಂಬ ಮನವಿ ಈಗ್ಗೆ ನಾಲ್ಕಾರು ವರ್ಷಗಳಿಂದಲೂ ಸರ್ಕಾರದವರಿಗೆ ಈ ಸಭೆಯ ಮೂಲಕವೂ, ಇತರ ವಿಧಾನಗಳಲ್ಲೂ ಬರುತ್ತಿದೆ. ಈಗ್ಗೆ ಆರು ವರ್ಷಗಳಿಂದ ಸರ್ಕಾರದ ಮುಂದಿಡುತ್ತಿದ್ದ ಈ ಬೇಡಿಕೆ ಪ್ರಜಾಸರ್ಕಾರ ಬಂದಮೇಲಾದರೂ ಈಡೇರುತ್ತದೆಂಬ ನಮ್ಮ ನಂಬಿಕೆ ಈಗ ನಿರಾಶಾದಾಯಕವಾಗಿದೆಯೆಂದು ತಿಳಿಸಲು ನನಗೆ ಬಹಳ ವ್ಯಸನವಾಗುತ್ತದೆ. ಈವರ್ಷ ಹಾಸನ ಡಿಸ್ಟ್ರಿಕ್ಟಿನದಲ್ಲಿ ಹೈಸೂಲ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹಂಚಿಕೆಯಾಗುವುದರಲ್ಲಿ 60-70 ಅರ್ಜಿಗಳು ಬಂದಿದ್ದರೂ allotment ಒಂಬತ್ತಕ್ಕೆ ಮಾತ್ರ. ಅದರಲ್ಲಿ ಐದು ಮಂದಿಗೆ renew ಆಗಿದೆ, ಮಿಕ್ಕ ನಾಲ್ಕುಮಂದಿಗೆ ಹೊಸದಾಗಿ ಸಿಕ್ಕಿದೆ. ಹೀಗಾದರೆ ಇದು ಯಾವ ರೀತಿ ಹಂಚಿಕೆ ಎಂಬುದನ್ನು ಯೋಚಿಸಬೇಕು. ಈ ರೀತಿ ಬಡ ಜನಾಂಗವನ್ನು ಉದ್ಧಾರ ಮಾಡಬೇಕೆಂದು ಇಂಡಿಯಾ ಸರ್ಕಾರದವರು ರಾಜ್ಯಾಂಗ ವಿಧಿಯಲ್ಲಿ ಸಹ ವಿಧಿವತ್ತಾಗಿ ತಿಳಿಸಿರುವಾಗ ಈ ರೀತಿ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಉತ್ತೇಜನವನ್ನು ಕೊಟ್ಟು ಇವರನ್ನು ಮುಂದುವರಿಸದಿದ್ದರೆ ಏನು ಪ್ರಯೋಜನ? ಹಿಂದುಳಿದ ಜನಾಂಗ ಹರಿಜನರಲ್ಲಿ ಮಾತ್ರವೇ ಅಲ್ಲದೆ ಇತರ ಕೋಮುಗಳಲ್ಲೂ ಬೇಕಾದಷ್ಟುಮಂದಿ ಇದ್ದಾರೆ. ಸರ್ಕಾರದವರು ಇಷ್ಟೊಂದು ಹಣವನ್ನು ವಿದ್ಯಾಭಿವೃದ್ಧಿಗಾಗಿ ಖರ್ಚು ಮಾಡುವಾಗ ಇವರಿಗೂ ಒಂದಿಷ್ಟು ಹೆಚ್ಚು ಹಣ ಖರ್ಚು ಮಾಡಿ ಇವರು ಮುಂದುವರಿಯುವುದಕ್ಕೆ ಸಹಾಯಕರಾಗು

ವುದು ಅತ್ಯಗತ್ಯ. ಬಡ ಸ್ಕೂಲ್ ಮಾಸ್ಟರುಗಳ ಸಂಬಳ ಸಾರಿಗೆಗಳನ್ನು ಸ್ವಲ್ಪಮಟ್ಟಿಗಾದರೂ ಹೆಚ್ಚಿಸಿ ಎಂದು ಈ ಸಭೆಯಲ್ಲಿ ಎಷ್ಟುಬಾರಿ ಪ್ರಶ್ನೆಗಳ ಮೂಲಕ, ನಿರ್ಣಯಗಳ ಮೂಲಕ ಸದಸ್ಯರು ಬೇಡಿಕೆಗಳನ್ನು ಸಲ್ಲಿಸಿಲ್ಲ? ಅದಕ್ಕೆ ಸ್ವಲ್ಪವಾದರೂ ಪುರಸ್ಕಾರ ದೊರಕಿದೆಯೇ? ಈ ಬಾಬಿಗಾಗಿ ಅಂದರೆ ವಿದ್ಯಾಭ್ಯಾಸಕ್ಕಾಗಿ ನಾಲ್ಕುಕೋಟಿ ರೂಪಾಯಿಗಳವರೆಗೂ ಹಣ ಯಾವ ರೀತಿ ಖರ್ಚಾಗುತ್ತಿದೆಯೋ ಗೊತ್ತಾಗುವುದಿಲ್ಲ. ಪ್ರಜಾಸರ್ಕಾರ ಬಂದ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಬಲಾತ್ಕಾರ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತಂದಿರುತ್ತಾರೆ. ಆದರೆ ಇದಕ್ಕಾಗಿ ಖರ್ಚು ಮಾಡುತ್ತಿರುವ ಹಣ ಯಾವ ರೀತಿ ಖರ್ಚಾಗುತ್ತಿದೆಯೋ ಕಾಣುತ್ತಿಲ್ಲ. ಬೋರ್ಡಿಂಗ್ ಹೋಂಗಳಲ್ಲಿರುವ ವಿದ್ಯಾರ್ಥಿಗಳಿಗೆ ತಲಾ ತಿಂಗಳಿಗೆ 15 ರೂಪಾಯಿ ಸಲ್ಲುವಂತೆ, ಒಪ್ಪೊತ್ತಿನ ಊಟದ ಖರ್ಚಾದರೂ ಸುಗಮವಾಗಿ ಸಾಗಿಸಲು ಅನುಕೂಲವಾಗುವಂತೆ ಒದಗಿಸಿಕೊಟ್ಟರೆ ಎಷ್ಟೋ ಅನುಕೂಲವಾಗುತ್ತದೆ. ನಮ್ಮ ಕಡೆಗೆ ಮಾನ್ಯ ಸಚಿವರು ಪ್ರವಾಸ ಬಂದಿದ್ದಾಗ ಅವರಿಗೆ ಇವರ ಕಷ್ಟವೇನೆಂಬುದು ವೇದ್ಯವಾಗಿದೆ. ಸರ್ಕಾರದವರು ಈ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲಿಸಿ ಹರಿಜನರಿಗೆ ಮಾತ್ರವಲ್ಲದೆ,, ಬಡತನದ ಬೇಗೆಗೆ ಸಿಕ್ಕಿರುವ ಇತರ ಹಿಂದುಳಿದ ಕೋಮಿನವರಿಗೂ ಹಣ ಸಹಾಯ ಮಾಡಿ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಕೋರುತ್ತೇನೆ. ಅನೇಕ ಗ್ರಾಮಗಳಲ್ಲಿ ವಿದ್ಯಾಭ್ಯಾಸಕ್ಕೆ ಪ್ರೈಮರಿ ವ್ಯಾಸಂಗಕ್ಕೆ ಕಟ್ಟಡಗಳಿಲ್ಲ. ವಿದ್ಯೆಗೆ ತಳಹದಿಯೋಪಾದಿಯಲ್ಲಿರುವ ಈ ಪ್ರೈಮರಿ ವಿದ್ಯಾಭ್ಯಾಸದ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಉತ್ತೇಜನ ಕೊಡುವುದು ಅವರ ಕರ್ತವ್ಯವೆಂದು ತಿಳಿಯಬೇಕು. ಅನೇಕ ಬಡವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾರ್ಗವಿಲ್ಲದೆ, ಲೋಯರ್ ಸೆಕೆಂಡರಿಯಾದ ಕೂಡಲೇ ಮುಂದೆ ಅವರನ್ನು ಓಡಿಸಲು ಹಣ ಸಹಾಯವಿಲ್ಲದೆ, ಚೈತನ್ಯವಿಲ್ಲದೆ ಹಾಗೆಯೇ ಬಿಟ್ಟಿರುತ್ತಾರೆ. ಇಂಥವರಿಗೆ ವಿದ್ಯಾರ್ಹತೆ ಇಲ್ಲದೆ, ಕೆಲಸಕ್ಕೆ ಸೇರಲು ಸಹಅರ್ಹತೆ ಇಲ್ಲದೆ ಅಲೆದಾಡುವ ಪರಿಸ್ಥಿತಿ ಬಂದಿದೆ. ಜನತೆ ಹೆಚ್ಚಿನ ವಿದ್ಯಾರ್ಹತೆಯನ್ನು ಪಡೆದಷ್ಟೂ ಆ ದೇಶದ ಅಭಿವೃದ್ಧಿ ಸಾಧನೆಯಾಗುತ್ತದೆಂದು ಸರ್ಕಾರದವರು ಮನಗಂಡು ಇವರಿಗೆ ವಿದ್ಯಾರ್ಹತೆಗಾಗಿ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಹೇಳುತ್ತೇನೆ. ಈಗ ನೋಡಿ, ಸಣ್ಣಸಣ್ಣ ನೌಕರರಿಗೆ, ಎಂದರೆ, ಉದಾಹರಣೆಗೆ ಒಬ್ಬ ಡಿಸ್ಟ್ರಿಕ್ಟ್ ಕಚೇರಿ ಜವಾನನನ್ನು ತೆಗೆದುಕೊಳ್ಳಿ, ಅವನು ಜವಾನ ಚಾಕರಿ ಮಾಡುತ್ತಾನೆ. ಅವನಿಗೆ ಅನ್ನಮಾಡುವುದಕ್ಕೆ ಸಾಕಾಗದೇ ಇರುವಷ್ಟು ಸಂಬಳ ಕೊಡುತ್ತಾ ಇದ್ದೀರಿ. ಅದೇ ಒಬ್ಬ ಡೆಪ್ಯುಟಿ ಕಮೀಷನರು. ಒಬ್ಬ ರೆವಿನ್ಯೂ ಇನ್ಸ್ಪೆಕ್ಟರು ಇವರುಗಳಿಗೆ ಕೊಡುತ್ತಾ ಇರುವ ಸಂಬಳ ನೋಡಿ, ಎಷ್ಟು ಜಾಸ್ತಿ ಇದೆ! ಆದರೆ ಆ ಜನಸಂಖ್ಯೆ ಈ ಜನಸಂಖ್ಯೆ ಮಾತ್ರ ಒಂದೇ ಇದೆ. ಇಷ್ಟು ಕಡಿಮೆ ಸಂಬಳದಲ್ಲಿ ಯಾವ ರೀತಿ ಅವನು ಹೆಂಡತಿ ಮಕ್ಕಳನ್ನು ಸಾಕಬೇಕು, ಜೀವನ ಮಾಡಬೇಕು ಎಂಬುದನ್ನು ಯೋಚನೆ ಮಾಡಿದರೆ, ಅವನಿಗೆ ಬಹಳ ಕಷ್ಟವಾಗುತ್ತದೆ. ಈ ದೆಶೆಯಿಂದ ಸರ್ಕಾರದವರು ಬಡವರಿಗೆ, ಕೇವಲ ಕೆಳದರ್ಜೆಯಲ್ಲಿರತಕ್ಕವರಿಗೆ ಅವರ ಕಷ್ಟವನ್ನು ನಿವಾರಣೆ ಮಾಡಲು, ಹೆಚ್ಚು ಹಣವನ್ನು ಒದಗಿಸಿ ಸಹಾಯವನ್ನು ಮಾಡಬೇಕೆಂದು ಹೇಳಿ ಪ್ರಾರ್ಥನೆ ಮಾಡುತ್ತೇನೆ.

ಈಗ ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳ ಸ್ಕಾಲರ್ ಷಿಪ್ಪು ಬಹಳ ಕಮ್ಮಿಯಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ಲೆಕ್ಕಾಚಾರ ಮಾಡಿದರೆ ಅದನ್ನು ಹಂಚತಕ್ಕ ಕಷ್ಟ ಎಷ್ಟಿದೆ ಎಂಬುದನ್ನು ಹೇಳತೀರದು. ಆ ವಿಚಾರದಲ್ಲಿ ಶ್ರೀ ಮಾದಯ್ಯನವರು ಹೇಳಿದಹಾಗೆ ಮೂರು ನಾಲ್ಕು ವರ್ಷಗಳಿಂದಲೂ ಯಾವ ರೀತಿ ಕೊಡುತ್ತಾ ಇದ್ದೀರೋ ಅದೇ ರೀತಿ ಇವೊತ್ತೂ ಸಹ ಕೊಡುತ್ತಾ ಇದ್ದೀರಿ. ನಾನೂ ಕೂಡ ಸ್ಕಾಲರ್‌ಷಿಪ್ ಕಮಿಟಿ ಮೆಂಬರಾಗಿದ್ದು ಈಗ ತಾವು ಕೊಟ್ಟಿರತಕ್ಕ ಸ್ಕಾಲರ್‌ಷಿಪ್‌ಗಳನ್ನು ಹಂಚಬೇಕಾದರೆ ಇರುವ ಕಷ್ಟ ಎಷ್ಟಿದೆ ಎಂಬುದು ನನಗೆ ಚನ್ನಾಗಿ ಗೊತ್ತಿದೆ. ಅನೇಕರು ನಮ್ಮ ಮಕ್ಕಳಿಗೆ ಫ್ರೀಷಿಪ್ ಕೊಡಿಸಿ, ಸ್ಕಾಲರ್ ಷಿಪು ಕೊಡಿಸಿ ಎಂದು ಕೇಳುತ್ತಾರೆ. ಅಷ್ಟೇ ಅಲ್ಲದೆ ನೀವು ನಮ್ಮ ಪ್ರತಿನಿಧಿಗಳಾಗಿದ್ದು ಇಷ್ಟು ಕೂಡ ಸಹಾಯ ಮಾಡದಿದ್ದರೆ ನಮ್ಮ ಪ್ರತಿನಿಧಿಗಳಾಗಿ ಹೋಗಿ ಏನು ಮಾಡುತ್ತೀರಿ ಎಂದು ನಮ್ಮ ಕ್ಷೇತ್ರದಲ್ಲಿ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಹೋದ ಹೋದ ಕಡೆಯಲ್ಲೆಲ್ಲಾ ಬಹಳ ಹೀನಾಯವಾಗಿ ಮಾತನಾಡುತ್ತಾರೆ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಬಡ ಜನರ ಹಿತದೃಷ್ಟಿಯಿಂದ ಯೋಚನೆ ಮಾಡಿ, ಒಂದಲ್ಲ ಇನ್ನೊಂದು ಭಾಗದಲ್ಲಿ ಹಣವನ್ನು ಉಳಿಸಿ ಅದನ್ನು ಬಡ ನೌಕರರ, ಬಡ ಉಪಾಧ್ಯಾಯರ ಮಕ್ಕಳ ವಿದ್ಯಾಭ್ಯಾಸಕ್ಕೆ ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ತಾವು ಪ್ರಿಂಟ್ ಮಾಡಿಸಿ ನಮಗೆ ಒದಗಿಸಿರುವ ಪುಸ್ತಕದಲ್ಲಿ ನೋಡಿದರೆ ಗೊತ್ತಾಗುತ್ತದೆ. ಇತರ ದೇಶಗಳಿಗೂ ನಮ್ಮ ಮೈಸೂರು ದೇಶಕ್ಕೂ ಹೋಲಿಸಿದರೆ ನಾವು ವಿದ್ಯಾಭ್ಯಾಸದಲ್ಲಿ ಎಷ್ಟೋ ಹಿಂದುಳಿದಿದ್ದೇವೆ. ಏಕೆ ಮುಂದುವರಿಸಬಾರದು? ಪ್ರತಿ ವರ್ಷವೂ ವಿದ್ಯಾಭ್ಯಾಸಕ್ಕಾಗಿ ಇಷ್ಟೊಂದು ಹಣ ಖರ್ಚಾಗುತ್ತಿರುವಾಗ ಸರ್ಕಾರದವರು ಆದಷ್ಟು ಜಾಗ್ರತೆ ಬಡ ಜನರನ್ನು ಮುಂದುವರಿಸುವುದಕ್ಕೆ ನ್ಯಾಯವಾದ ರೀತಿಯಲ್ಲಿ ಹಣವನ್ನು ಖರ್ಚು ಮಾಡತಕ್ಕ ಒಂದು ನೀತಿಯನ್ನು ಕಂಡುಹಿಡಿದು ಕೆಲಸಕಾರ್ಯಗಳನ್ನು ಮಾಡಬೇಕಾಗಿತ್ತು. ಆ ರೀತಿ ಮಾಡಿಲ್ಲ ಎಂದು ಹೇಳಿ ವಿಷಾದದಿಂದ ಹೇಳಬೇಕಾಗಿದೆ. ಈಗಾಗಲೇ ಹಿಂದಿನ ಆರು ವರ್ಷಗಳಿಂದ ವಿದ್ಯಾಭ್ಯಾಸದ ವಿಚಾರದಲ್ಲಿ ಅನೇಕ ಬದಲಾವಣೆಗಳಾಗಿದ್ದರೂ ಕೂಡ ಬಡವರಿಗೆ ಅನುಕೂಲವಾಗಿಲ್ಲ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಬಡವರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕು. ಅಷ್ಟೇ ಅಲ್ಲದೆ ಬಡ ನೌಕರರ ಜೀವನ ಮಟ್ಟವನ್ನು ಹೆಚ್ಚಿಸಿಕೊಟ್ಟು ಸಹಾಯ ಮಾಡಬೇಕು ಎಂದು ಹೇಳಿ ಸರ್ಕಾರದವರನ್ನು ಪ್ರಾರ್ಥಿಸಿ, ನಾನು ಎರಡು ಮಾತುಗಳನ್ನಾಡುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರನ್ನು ವಂದನೆಮಾಡಿ, ಈ ಸಭಾ ಸದಸ್ಯರೆಲ್ಲರಿಗೂ ನಮಸ್ಕಾರ ಮಾಡಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ-ಅನುಸೂಚಿತ ಜಾತಿಗಳು).—ಸಭಾಪತಿಗಳೇ, ಸ್ವಾಮಿ, ಶ್ರೀ ಮಾದಯ್ಯನವರು ತಂದಿರತಕ್ಕ ಈ ಜೋತಾ ನಿರ್ಣಯವನ್ನು ಪುಷ್ಟೀಕರಿಸುವುದಕ್ಕೆ ನನಗೆ ಅವಕಾಶ ಕೊಟ್ಟದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಈಗಾಗಲೇ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯಲ್ಲಿ ಸುಮಾರು 1/5 ಭಾಗ ಹರಿಜನರು ಇದ್ದಾರೆ. ಒಟ್ಟು ವಿದ್ಯಾಭ್ಯಾಸಕ್ಕೆ ಎಷ್ಟು ಹಣ ಖರ್ಚುಮಾಡುತ್ತಾ ಇದ್ದೀರೋ ಅದರಲ್ಲಿ ಹರಿಜನರ ಪ್ರಜಾಸಂಖ್ಯೆಗನುಗುಣವಾಗಿ ಎಷ್ಟು ಹಣ ಖರ್ಚಾಗುತ್ತಾ ಇದೆ ಎಂಬುದನ್ನು ಯೋಚನೆಮಾಡಬೇಕು ಎಂದು ಈ ಮಾನ್ಯ ಸಭೆಯಲ್ಲಿ

(ಶ್ರೀ ಜಿ. ಪುಟ್ಟಸ್ವಾಮಿ.)

ನಾನು ಹೇಳುತ್ತೇನೆ. ಹಾಸ್ಟಲುಗಳಿಗೆ ಸಂಸ್ಥಾನಾ ಮಳೆ ಗ್ರಾಂಟ್‌ಗಾಗಿ ಎಷ್ಟು ಖರ್ಚುಮಾಡುತ್ತಾ ಇದ್ದೀರಿ, ಅದರಲ್ಲಿ ನ್ಯಾಯವಾಗಿಯೂ ಪ್ರಜಾಸಂಖ್ಯೆಗನುಗುಣವಾಗಿ ಹರಿಜನರಿಗೆ ಹಣ ಖರ್ಚುಮಾಡಲಾಗುತ್ತಿದೆಯೇ? ಹರಿಜನರ ವಿದ್ಯಾಭ್ಯಾಸಕ್ಕೆ ಸರಿಯಾದ ಸೌಕರ್ಯ ಕೊಡಲಾಗುತ್ತಿದೆಯೇ? ಎಷ್ಟು ಹರಿಜನರು ಪ್ರೈಮರಿ ಸ್ಕೂಲು, ಮಿಡ್ಲ್ ಸ್ಕೂಲು, ಹೈಸೂಲು, ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ಎಷ್ಟು ಜನರಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವಿದೆ ಎಂಬುದನ್ನು ಯೋಚನೆ ಮಾಡಿದರೆ ಅನೇಕರಿಗೆ ವಿದ್ಯಾಭ್ಯಾಸ ಮಾಡಲು ಅನುಕೂಲವಿಲ್ಲದೆ ಬಿಟ್ಟು ಬಿಟ್ಟಿದ್ದಾರೆ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ಅಷ್ಟೇ ಅಲ್ಲದೆ ಅವರನ್ನು ಕೆಲವುಕಡೆ ಇತರರ ಜೊತೆಗೆ ಸೇರಿಸಿಕೊಳ್ಳುವವರಾಗಿದ್ದಾರೆ ಎಂಬುದನ್ನು ದುಃಖದಿಂದ ಹೇಳುತ್ತಿದ್ದೇನೆ. ಹೊಟ್ಟೆಗೆ ಇಲ್ಲದೆ, ಬಟ್ಟೆಗೆ ಇಲ್ಲದೆ, ಜೀವನೋಪಾಯಕ್ಕೆ ಯಾವುದೇ ಒಂದು ವಿಧವಾದ ಆಧಾರವೂ ಇಲ್ಲದಂಥ ವಿದ್ಯಾರ್ಥಿಗಳು ಸರ್ಕಾರದ ಸಹಾಯ ದೊರೆಯದಿದ್ದರೆ ಯಾವರೀತಿ ವಿದ್ಯಾಭ್ಯಾಸ ಮಾಡಬೇಕೋ ನನಗಂತೂ ಅರ್ಥವಾಗುವುದಿಲ್ಲ. ಈ ಕಾರಣದಿಂದ ಹರಿಜನರಿಗೆ ವಿದ್ಯಾಭ್ಯಾಸ ಸೌಕರ್ಯಗಳನ್ನು ಹೆಚ್ಚಿಸುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳವರು ವಿಧಾನಪರಿಷತ್ತಿನಲ್ಲಿ ಅಪ್ಪಣೆಮಾಡಿದ್ದಾರೆ ಎಂದು ತಿಳಿದುಬರುತ್ತದೆ. ಇದು ಸಂತೋಷದ ವಿಷಯ. ನಿಮ್ನ ತರಗತಿಗಳವರ ವಿದ್ಯಾಭಿವೃದ್ಧಿಗೆ ಹಾಸ್ಟಲುಗಳಿಗಾಗಿ ಹೆಚ್ಚು ಗ್ರಾಂಟ್ ಒದಗಿಸುತ್ತೇವೆ ಎಂದು ಹೇಳಿರುವುದು ಪ್ರಗತಿದಾಯಕವಾದ ಭರವಸೆಯಾಗಿದೆ. ಈ ರೀತಿ ಗ್ರಾಂಟನ್ನು ಹೆಚ್ಚಿಸುವ ವಿಷಯದಲ್ಲಿ ಮಾನ್ಯ ಸಭೆಯ ಅನೇಕ ಸದಸ್ಯರುಗಳ ಮತ್ತು ದೇಶದಲ್ಲಿರತಕ್ಕ ಜನಗಳ ಒಂದು ಸದಭಿಪ್ರಾಯಕ್ಕೆ ಮನ್ನಣೆ ಕೊಡುತ್ತೀರಿ ಎಂದು ನಂಬಿದ್ದೇನೆ. ಈಗಾಗಲೇ ಅನೇಕರು ಮಾತನಾಡಿರುವಂತೆ ಕಟ್ಟಡಗಳಿಲ್ಲದೇ ಅನೇಕ ಸ್ಕೂಲುಗಳು ನಡೆಯುತ್ತಾ ಇವೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ ಮಳೆಗಾಲದಲ್ಲಿ ಮಳೆ ಹೆಚ್ಚಾಗಿ ಬರುತ್ತದೆ. ಅಲ್ಲಿ ಹುಲ್ಲುಜೋಪಡಿಗಳಲ್ಲಿ ಸ್ಕೂಲುಗಳನ್ನು ನಡೆಸುವುದಕ್ಕೆ ಆಗದೆ ಅನೇಕ ಸ್ಕೂಲುಗಳ ಉಪಾಧ್ಯಾಯರುಗಳು ಸುಮ್ಮನೆ ಮನೆಯಲ್ಲೇ ಇರಬೇಕಾಗುತ್ತದೆ. ಈ ರೀತಿ ಆದರೆ ಸರ್ಕಾರದವರ ಅಪ್ಪಣೆ ಮತ್ತು ಪ್ರಜೆಗಳ ಉದ್ದೇಶ ನೆರವೇರಿದಂತೆ ಆಯಿತೇ ಎಂದು ಕೇಳಬೇಕಾಗಿದೆ. ಮಲೆನಾಡಿನಲ್ಲಿ ಸಂಚಾರಮಾರ್ಗ ಇಲ್ಲದೆ ಒಂದು ಇಲಾಖೆಯ ಆಫೀಸರೂ ಕೂಡ ಸ್ಕೂಲುಗಳಿರತಕ್ಕ ಗ್ರಾಮಕ್ಕೆ ಭೇಟಿ ಕೊಡುವುದಕ್ಕೆ ಅವಕಾಶವಿರುವುದಿಲ್ಲ. ಈ ರೀತಿ ಕಾಡಿನ ಮಧ್ಯದಲ್ಲಿರತಕ್ಕ ಆ ಗ್ರಾಮಗಳ ಸ್ಕೂಲುಗಳಿಗೆ ಹೋಗಿ ಭೇಟಿ ಕೊಡುವುದಕ್ಕೆ ಆಗದೇ ಇರುವಾಗ ಆ ಸ್ಕೂಲುಗಳು ಎಷ್ಟುಮಟ್ಟಿಗೆ ನಡೆಯುತ್ತಾ ಇವೆ, ವಿದ್ಯಾಭ್ಯಾಸ ಎಷ್ಟುಮಟ್ಟಿಗೆ ಆಗುತ್ತಾ ಇದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲದೆ ಬಹಳ ದ್ರವ್ಯ ನಷ್ಟವಾಗುತ್ತಾ ಇದೆ ಎಂದು ಹೇಳುತ್ತೇನೆ. ಈ ಕಾರಣಗಳಿಂದ ಮಲೆನಾಡಿನಲ್ಲಿ ಹೆಚ್ಚು ಸ್ಕೂಲು ಕಟ್ಟಡಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಮೈದಾನದಲ್ಲಿ ವಿದ್ಯಾಭ್ಯಾಸಕ್ಕೆ ಎಷ್ಟರಮಟ್ಟಿನ ಪ್ರಾಮುಖ್ಯತೆ ಕೊಟ್ಟಿದ್ದೀರೋ, ಸೌಲಭ್ಯ, ಅನುಕೂಲತೆಗಳನ್ನು ಒದಗಿಸಿದ್ದೀರೋ, ಅಷ್ಟೇ ಪ್ರಾಮುಖ್ಯತೆ, ಸೌಲಭ್ಯ, ಅನುಕೂಲಗಳನ್ನು ಮಲೆನಾಡಿಗೆ ಕೊಟ್ಟಿಲ್ಲ; ಮಲೆನಾಡಿನ ವಿದ್ಯಾಭ್ಯಾಸದ ಸೌಕರ್ಯಗಳಿಗೂ ಮೈದಾನದ ಸೌಕರ್ಯಗಳಿಗೂ ಬಹಳ ತಾರತಮ್ಯವಿದೆ ಎಂದು ನನಗೆ ತಿಳಿದಿರುವಮಟ್ಟಿಗೆ ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ. ಮಲೆನಾಡಿನಲ್ಲಿ ವರ್ಷದಲ್ಲಿ ಸುಮಾರು ಆರು ತಿಂಗಳು ಸೂರ್ಯನನ್ನೇ ಕಾಣುವುದು ಕಷ್ಟ. ಸೂರ್ಯನನ್ನು ಕಾಣದೇ ಮಳೆ ಹೆಚ್ಚಾಗಿದ್ದು ಜನಸಂಚಾರಕ್ಕೆ ಅವಕಾಶವಿಲ್ಲದೆ ಅನೇಕ ಸ್ಥಳಗಳಲ್ಲಿ ಸೇತುವೆಗಳಿಲ್ಲದೆ, ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗಲು ಬಹಳ ತೊಂದರೆಯಾಗಿದೆ. ಈ ಕಾರಣಗಳಿಂದ ಹೆಚ್ಚಿನ ಗ್ರಾಂಟನ್ನು ಮಲೆನಾಡಿನ ಸ್ಕೂಲುಗಳಿಗೆ ಮತ್ತು ಕಟ್ಟಡಗಳಿಗೆ ಬಡ್ಜೆಟ್‌ನಲ್ಲಿ ಪ್ರೊವೈಡ್‌ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯಾರ್ಥಿವೇತನಗಳ ವಿಷಯವನ್ನು ತೆಗೆದುಕೊಂಡರೆ ಮಲೆನಾಡಿನಲ್ಲಿ ಈಗ ವಿಶೇಷವಾಗಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಾ ಇದ್ದಾರೆ. ಅಷ್ಟು ಜನ ವಿದ್ಯಾರ್ಥಿಗಳಲ್ಲಿ ಕೊನೆಯ ಪಕ್ಷ $\frac{1}{4}$ ಭಾಗದ ವಿದ್ಯಾರ್ಥಿಗಳಿಗೂ ಕೂಡ ವಿದ್ಯಾರ್ಥಿವೇತನ ಸಿಕ್ಕುತ್ತಾ ಇಲ್ಲ. ಈಗಾಗಲೇ ನಮ್ಮ ವಿದ್ಯಾಸಚಿವರು ನಮ್ಮ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ನಿಮ್ನವರ್ಗದವರಿಗೆ ಉಚಿತವಾಗಿ ಪ್ರೈಮರಿ ಸ್ಕೂಲುಗಳಲ್ಲಿ ಪುಸ್ತಕಗಳು ಮತ್ತು ಸ್ಲೇಟುಗಳನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಎಷ್ಟು ಸ್ಕೂಲುಗಳಿಗೆ, ಎಷ್ಟು ಜನ ವಿದ್ಯಾರ್ಥಿಗಳಿಗೆ ಈ ರೀತಿ ಉಚಿತವಾಗಿ ಸ್ಲೇಟ್ ಪುಸ್ತಕ ಕೊಡುತ್ತಾ ಇದ್ದಾರೆ ಎಂಬುದನ್ನು ಈ ಮಾನ್ಯ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಂಸ್ಥಾನಕ್ಕೆಲ್ಲಾ ಕೇವಲ 3 ಸಾವಿರ ರೂಪಾಯಿಗಳನ್ನು ಪುಸ್ತಕ, ಬಟ್ಟೆ, ಬಳಪ ಇತ್ಯಾದಿಗಳಿಗಾಗಿ ಕೊಟ್ಟರೆ ಸಾಕೇ ಎಂಬುದನ್ನು ನಾನು ಕೇಳುತ್ತೇನೆ. ಯಾವಾಗಲೂ ಒಂದು ಸರಿಯಾದ ಅಂದಾಜುಮಾಡಿ ಕೊಟ್ಟಂಥ ಒಂದು ಗ್ರಾಂಟನ್ನು ಮುಂದುವರಿಸಿಕೊಂಡು ಬರುವುದಕ್ಕೂ ಕೂಡ ಯೋಚನೆ ಮಾಡಬೇಕಾಗಿದೆ. ರೀಡಿಂಗ್ ರೂಂ ಮತ್ತು ಲೈಬ್ರೆರಿ ಫೀಜಿಗೆ ಅನೇಕ ಸಂದರ್ಭಗಳಲ್ಲಿ (exempt) ಮಾಫಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಈಗ ನಿಮ್ನತರಗತಿಯ ಎಷ್ಟು ವಿದ್ಯಾರ್ಥಿಗಳಿಗೆ exemption ಸಿಕ್ಕಿದೆ ಎಂಬತಕ್ಕದ್ದನ್ನು ನೋಡಿದರೆ ಅದೂ ಕೂಡ ಬಹಳ ಕಡಮೆ. ಹೀಗಿರುವಾಗ ಹರಿಜನರಿಗೆ ಬೇಕಾದಷ್ಟು ವಿದ್ಯಾಭ್ಯಾಸ ಸೌಕರ್ಯ ಕೊಟ್ಟಿದ್ದೇವೆ, ವಿದ್ಯಾರ್ಥಿನಿಲಯಗಳನ್ನು ಅನೇಕಕಡೆ ಸ್ಥಾಪಿಸಿದ್ದೇವೆ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಡುತ್ತಾ ಇದ್ದೇವೆ ಎಂದು ಈ ಮಾನ್ಯ ಸಭೆಯಲ್ಲಿ ಸರ್ಕಾರದವರು ಏನು ಹೇಳುತ್ತಾರೋ ಅದು ಬರೀ ಹೇಳುವ ಭಾವನೆಯಿಂದ ಕೇಳುವವರಿಗೆ ಒಂದು ತೃಪ್ತಿಯನ್ನುಂಟುಮಾಡಲು ಸಹಕಾರವಾಗುತ್ತದೆ. ಅಷ್ಟೇ ಸಾಲದು ; ಬಾಯಲ್ಲಿ ಹೇಳುವ ವಿಚಾರವನ್ನು ಕಾರ್ಯತಃ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಎಷ್ಟೋಜನ ವಿದ್ಯಾರ್ಥಿಗಳು ಅನುಕೂಲವಿಲ್ಲದೆ ವಿದ್ಯಾಭ್ಯಾಸ ಮಾಡುವುದನ್ನು ಬಿಟ್ಟು ಬೀದಿ ಭಿಕಾರಿಗಳಾಗಿದ್ದಾರೆ. ಅವರನ್ನು ಮೇಲಕ್ಕೆ ಎತ್ತುವುದು ಸರ್ಕಾರದವರ ಕರ್ತವ್ಯವಲ್ಲವೇ? ಈಗ ಯಾವರೀತಿ ಆಗುತ್ತಾ ಇದೆ ಎಂಬುದನ್ನು ಪರಿಶೀಲನೆ ಮಾಡಿ ಒಂದು ಪಟ್ಟಿ ತಯಾರಿಸಿ ನಿಮ್ನವರ್ಗದವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಅನುಕೂಲವಾಗುವಂತೆ ಮಾಡಲು ಕೊನೆಪಕ್ಷ ಮೆಟ್ರಿಕ್ಯುಲೇಷನ್‌ವರೆಗಾದರೂ ವಿದ್ಯಾರ್ಥಿನಿಲಯಗಳನ್ನು ಏರ್ಪಡಿಸಿ ಮುಫತ್ತಾಗಿ ಅವರಿಗೆ ಸೌಕರ್ಯಗಳನ್ನೇರ್ಪಡಿಸಿ ಕೊಡಬೇಕು. ಈ ರೀತಿ ಪ್ರತಿ ತಾಲ್ಲೂಕಿನಲ್ಲಿ, ಪ್ರತಿ ಹೋಬಳಿ ಹೆಡ್‌ಕ್ವಾರ್ಟರಿನಲ್ಲಿ ಕೆಲವು ವರ್ಷ ಅಥವ ಒಂದು ಗೊತ್ತಾದ ಅವಧಿಯವರೆಗೆಯಾದರೂ ಆದರೂ ಏರ್ಪಾಡುಮಾಡಿದರೆ ಅನುಕೂಲವಾಗುತ್ತ

ದೆಯೇ ವಿನಃ ಸುಮ್ಮನೆ ಒಂದು ಯೋಜನೆ ತಯಾರು ಮಾಡಿಕೊಂಡು ವಿದ್ಯಾಭ್ಯಾಸಕ್ಕೆ 4 ಕೋಟಿಗೂ ಮೇಲ್ಪಟ್ಟು ಖರ್ಚುಮಾಡುತ್ತೇವೆ ಎಂದು ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅವಿದ್ಯಾವಂತರ ಸಂಖ್ಯೆ ಹೆಚ್ಚಿ ದೇಶ ಮುಂದುವರಿಯುವುದಕ್ಕೆ ಅನಾನುಕೂಲವಾಗುತ್ತದೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಆದ್ದರಿಂದ ವಿದ್ಯಾಭ್ಯಾಸಕ್ಕೆ ಮೀಸಲಾಗಿಟ್ಟಿರತಕ್ಕ ಗ್ರಾಂಟಿನ ಪೈಕಿ ಯಾವ ಯಾವ ಭಾಗದಲ್ಲಿ ಈ ಜನಾಂಗದವರಿಗೆ ಸೌಲಭ್ಯಗಳನ್ನೊದಗಿಸಬೇಕೋ ಆಯಾ ಭಾಗಕ್ಕೆ ಹೆಚ್ಚಿನ ಹಣ ಒದಗಿಸಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಹೈಸ್ಕೂಲು ಮತ್ತು ಯೂನಿವರ್ಸಿಟಿ ವಿದ್ಯಾಭ್ಯಾಸದ ವಿಚಾರವನ್ನು ತೆಗೆದುಕೊಂಡರೆ ವ್ಯಾಸಂಗಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆ ನಮ್ಮ ಪ್ರಜಾಸಂಖ್ಯೆಗನುಗುಣವಾಗಿಲ್ಲ. ಬಹಳ ಕಡಮೆಯಾಗಿದೆ. ಈ ರೀತಿ ಕಡಮೆಯಾಗಿ ಇದ್ದರೂ ಕೂಡ ಎಷ್ಟು ಗ್ರಾಂಟುಗಳನ್ನು ಒದಗಿಸಬೇಕೋ ಅಷ್ಟು ಒದಗಿಸುತ್ತಾ ಇಲ್ಲ ಎಂಬುದನ್ನು ವಿಷಾದದಿಂದ ಹೇಳುತ್ತೇನೆ. ಆದ್ದರಿಂದ ನಿಮ್ಮ ವರ್ಗದವರ ಪ್ರಜಾಸಂಖ್ಯೆಗನುಗುಣವಾಗಿ ದೇಶಾದ್ಯಂತ ವಿದ್ಯಾರ್ಥಿನಿಲಯಗಳಿಗೂ ಎಷ್ಟು ಗ್ರಾಂಟ್ ಕೊಡುತ್ತಿದ್ದೀರೋ ಮತ್ತು ವಿದ್ಯಾರ್ಥಿವೇತನಕ್ಕಾಗಿ ಎಷ್ಟು ಹಣ ಒದಗಿಸುತ್ತೀರೋ ಅದರಲ್ಲಿ ಲೆಕ್ಕಾಚಾರ ಹಾಕಿ ದಾಮಾಷಾ ಪ್ರಕಾರ ಗ್ರಾಂಟು ಕೊಡಬೇಕೆಂದು ಹೇಳುತ್ತೇನೆ ಮತ್ತು 1954-55ನೇ ಸಾಲಿನ ಬಡ್ಜೆಟ್‌ನಲ್ಲೇ ಈ ಭಾಗಕ್ಕೆ ಹೆಚ್ಚು ಹಣ ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರೆಂದು ನನಗೆ ನಂಬಿಕೆ ಇದೆ. ಈ ಸಭೆಯಲ್ಲಿರುವ 19 ಜನ ನಿಮ್ಮ ವರ್ಗದ ಸದಸ್ಯರ ಅಭಿಪ್ರಾಯ ಮತ್ತು ಇತರ ಹಲವು ಮಾನ್ಯ ಸದಸ್ಯರ ಅಭಿಪ್ರಾಯ ಸಹ ಇದೇರೀತಿಯಿದೆಯೆಂಬುದು ವ್ಯಕ್ತವಾಗಿದೆ. ಆದ್ದರಿಂದ ವಿದ್ಯಾಭ್ಯಾಸಕ್ಕೆ ಸೌಕರ್ಯವನ್ನೊದಗಿಸುವಾಗ ವಿದ್ಯಾರ್ಥಿವೇತನಗಳನ್ನು ಹೆಚ್ಚಿಸುವುದಕ್ಕೂ ಮತ್ತು ವಿದ್ಯಾಭ್ಯಾಸದ ಇತರ ಸೌಲಭ್ಯಗಳನ್ನು ನೀಡುವುದಕ್ಕೂ ಯಾವ ಸದಸ್ಯರಲ್ಲೂ ಭಿನ್ನಾಭಿಪ್ರಾಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದರಂತೆ ಎಲ್ಲ ಸದಸ್ಯರ ಅಭಿಪ್ರಾಯವನ್ನೂ ದೇಶದ ಅಭಿವೃದ್ಧಿ ದೃಷ್ಟಿಯಿಂದ ನೆರವೇರಿಸಿಕೊಡುವುದಾಗಿ ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತಾರೆಂದು ನಂಬಿ ಈ ಖೋತಾ ನಿರ್ಣಯವನ್ನು ಪುಷ್ಟೀಕರಿಸುತ್ತೇನೆ. ಮಾನ್ಯ ಅಧ್ಯಕ್ಷರು ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಮತ್ತೊಮ್ಮೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಯ ಸಚಿವರು).—ಸ್ವಾಮಿ, ಶ್ರೀ ಮಾದಯ್ಯನವರು ಈ ಕತ್ತರಿ ನಿರ್ಣಯವನ್ನು ಪ್ರಾರಂಭಿಸುವಾಗ ಬಹಳ ವಿನಯದಿಂದ ಮತ್ತು ಒತ್ತಾಯದಿಂದ ತಾವು ಈ ನಿರ್ಣಯವನ್ನು ಮಂಡಿಸುವುದಾಗಿ ಹೇಳಿದರು. ಅಷ್ಟೇ ವಿನಯದಿಂದ ಇನ್ನೂ ಹೆಚ್ಚಾದ ಅಂಕಿ ಅಂಶಗಳ ಆಧಾರದಿಂದ ಅವರ ಹೇಳಿಕೆಗೆ ನಾನು ಜವಾಬು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅವರು ಮಾತನಾಡುವಾಗ ಈ ನಿರ್ಣಯಕ್ಕೆ ಸಂಬಂಧಪಟ್ಟಿರುವ ವಿಷಯಗಳೇ ಅಲ್ಲದೆ ಬೇರೆ ವಿಷಯಗಳು ಕೂಡ ಅನೇಕವು ನಿರೂಪಿಸಲ್ಪಟ್ಟಿವೆ. ಆದರೆ ಜವಾಬು ಹೇಳುವಾಗ್ಗೆ ಈ ನಿರ್ಣಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಈ ಸಭೆಯ ಮುಂದಿಡುವುದಕ್ಕೆ ಪ್ರಯತ್ನಪಡುತ್ತೇನೆ. ಮಾನ್ಯ ಸದಸ್ಯರು ಮಾತನಾಡುವಾಗ ರಾಜ್ಯಾಂಗಕ್ಕೆ ವಿರೋಧವಾಗಿ ವರ್ತಿಸುತ್ತಿದ್ದಾರೆಂದು ಹೇಳಿರುವುದು ಅರ್ಥವಾಗಲಿಲ್ಲ, ಇನ್ನೂ ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದೇನೆ. ಸಾಮಾನ್ಯವಾಗಿ ಹೇಳಬೇಕಾದರೆ ಇತರ ಯಾವ ದೇಶಕ್ಕೂ ಕೂಡ ಆದಿಕರ್ಣಾಟಕರ ಪುರೋಭಿವೃದ್ಧಿ ವಿಚಾರದಲ್ಲಿ ಮೈಸೂರು ದೇಶ ಹಿಂದೆ ಬಿದ್ದಿಲ್ಲ. ಹೈದರಾಬಾದು, ಬೊಂಬಾಯಿ ಇತ್ಯಾದಿ ದೇಶಗಳ ಸ್ಥಿತಿಗತಿ ನೋಡಿದ್ದೇನೆ. ವಿದ್ಯಾರ್ಥಿವೇತನ, ಹಾಸ್ಟೆಲ್ ಮುಂತಾದುವನ್ನು ಇತರ ಸಂಸ್ಥಾನಗಳಿಗಿಂತ ನಾವು ಹೆಚ್ಚಾಗಿ ಒದಗಿಸಿದ್ದೇವೆ. ನನಗಾದರೂ ಗೊತ್ತಿರುವ ಹಾಗೆ ಇದು ಯಾವ ಇತರ ಸಂಸ್ಥಾನಕ್ಕೂ ಕೂಡ ಯಾವ ವಿಧದಲ್ಲೂ ಹಿಂದೆ ಬಿದ್ದಿಲ್ಲ, ಮುಂದುವರಿದಿದೆ ಎಂದು ನಾನು ಈ ಸಭೆಗೆ ತಿಳಿಸಲು ಸಿದ್ಧನಾಗಿದ್ದೇನೆ.

ಇಲ್ಲಿನ ವಿದ್ಯಾರ್ಥಿವರ್ಗ ತೆಗೆದುಕೊಂಡರೆ ಅವರಿಗಿರುವ ಅನುಕೂಲತೆಗಳೇನೆಂಬುದನ್ನು ನೋಡಬಹುದು. ನಾನು ಮೊದಲೇ ಅರಿಕೆ ಮಾಡಿಕೊಂಡ ರೀತಿಯಲ್ಲಿ ಪ್ರೈಮರಿ ಸ್ಕೂಲಿನ ಮೊದಲನೆಯ ಕ್ಲಾಸಿನಿಂದ ಹಿಡಿದು ಎಷ್ಟು ದಿವಸ ಯಾವ ಸ್ಕೂಲು ಅಥವಾ ಕಾಲೇಜಿನಲ್ಲಿ ಓದಿದರೂ ಒಂದು ಕಾಸೂ ಶುಲ್ಕವಿಲ್ಲದಂತೆ ಎಲ್ಲ ಕಡೆಗೂ ವಿನಾಯಿತಿ ಕೊಟ್ಟಿರುವುದನ್ನು ಸಭಿಕರು ಗಮನಕ್ಕೆ ತೆಗೆದುಕೊಳ್ಳಬೇಕೆಂದು ವಿನಯಪೂರ್ವಕವಾಗಿ ಹೇಳುತ್ತೇನೆ, ಜೊತೆಗೆ ಈ ಠರಾವಿನಲ್ಲಿ “to urge the need for providing adequate number of B. C. Scholarships to the Scheduled Caste Students” ಎಂದು ಹೇಳಿದ್ದಾರೆ. Adequate number ಎಂಬುದನ್ನು ನಿರ್ಣಯಮಾಡುವುದು ಬಹಳ ಕಷ್ಟ. ಆದರೂ ಅಂಕಿ ಅಂಶಗಳನ್ನು ಈ ದಿವಸ ಒಂದು ಪ್ರಶ್ನೆಗೆ ಕೊಟ್ಟಿರುವ ಉತ್ತರದ ರೀತ್ಯಾ ನೋಡಿದರೆ 1949-50 ರಲ್ಲಿ ಈ ವರ್ಷ ಹೈಸ್ಕೂಲಿನಲ್ಲಿ ಎಷ್ಟು ಅರ್ಜಿಗಳು ಬಂದಿವೆಯೋ ಸಾಮಾನ್ಯವಾಗಿ ಅವುಗಳ 1/3 ಭಾಗದ ಅರ್ಜಿಗಳಿಗೆ ಪುರಸ್ಕಾರ ಕೊಟ್ಟು ವಿದ್ಯಾರ್ಥಿವೇತನ ಕೊಟ್ಟಿರುವುದು ರೇಷಿಯೋದಿಂದ ಸ್ಪಷ್ಟವಾಗುತ್ತದೆ. 1952-53ರಲ್ಲಿ ಅರ್ಜಿಗಳ ಸಂಖ್ಯೆ ಕೊಟ್ಟಿರುವ ವಿದ್ಯಾರ್ಥಿಗಳ ಸಂಖ್ಯೆ ತೆಗೆದುಕೊಂಡರೂ 1/3 ಭಾಗದ ಪ್ರಪೋರ್ಷನ್ ಮುಂದುವರಿದುಕೊಂಡು ಬರುತ್ತಿರುವುದು ಸ್ಪಷ್ಟವಾಗುತ್ತದೆ. 1953-54ನೆಯ ಸಾಲಿನ ಅಂಕಿ ಅಂಶ ತೆಗೆದುಕೊಂಡು ಏನು ಮಾಡಬೇಕೆಂಬುದನ್ನು ಮುಂದಿನ ವರ್ಷ ನೋಡಿ ನಿಷ್ಕರ್ಷೆ ಮಾಡುವುದಕ್ಕೆ ಅವಕಾಶವಿದೆ. ಇನ್ನೂ ಆ ಅಂಕಿ ಅಂಶ ಬಂದಿಲ್ಲ, ಸಾಕಷ್ಟು ಕಾಲಾವಕಾಶವಿದೆ ಎಂದು ವಿನಂತಿ ಮಾಡುತ್ತೇನೆ. ಇದೇ ರೀತಿಯಲ್ಲಿ ಮಿಡ್ಲ್ ಸ್ಕೂಲಿನಲ್ಲಿ 1949-50ರಲ್ಲಿ 4,304 ಅರ್ಜಿಗಳು ಬಂದು 799 ಜನರಿಗೆ ವಿದ್ಯಾರ್ಥಿವೇತನ ಸಿಕ್ಕಿ 1/5 ಭಾಗದವರಿಗೆ ಸಿಕ್ಕಿದಂತಾಗಿದೆ. 1952-53ರ ರಲ್ಲಿ 4,493 ವಿದ್ಯಾರ್ಥಿಗಳು ಅರ್ಜಿ ಹಾಕಿದಾಗ 899 ಜನರಿಗೆ ಸಿಕ್ಕಿದೆ. ಅದು 1/5 ಭಾಗದ ರೇಷಿಯೋವಿಗೆ ವರ್ಕೌಟ್ ಆಗುತ್ತದೆ. ಹಿಂದಿನಂತೆಯೂ 1954-55ರಲ್ಲೂ ಹೈಸ್ಕೂಲು ಮತ್ತು ಮಿಡ್ಲ್ ಸ್ಕೂಲುಗಳಲ್ಲಿ ಅರ್ಜಿ ತೆಗೆದುಕೊಂಡು ಆ ಪ್ರಪೋರ್ಷನ್ ಕಾಪಾಡಲು ಎಷ್ಟು ಹೆಚ್ಚಿಸಬೇಕೆಂಬುದನ್ನು ಖಂಡಿತ ಗಮನಿಸುತ್ತೇವೆಂಬುದನ್ನು ನಾನು ಹೇಳ ಬಯಸುತ್ತೇನೆ.

ವರ್ಷೇ ವರ್ಷೇ 72,490 ರೂಪಾಯಿಗಳನ್ನೇ ಕೊಡುತ್ತೀರೆಂದು ಹೇಳಿದರು. ಹೆಚ್ಚು ಹುಡುಗರು ಬರುವಾಗ ಪ್ರಪೋರ್ಷನ್ ಏನಿದೆಯೋ ಅದನ್ನು ಬಹುಶಃ ಹೆಚ್ಚಿಸಲು ಪ್ರಯತ್ನ ಮಾಡಿದ್ದೇವೆ. ಹುಡುಗರು ಜಾಸ್ತಿಯಾಗುತ್ತಿರುವುದು ನಿಜ, ಅವರಿಗೆ ಕೊಡುವ ವಿದ್ಯಾರ್ಥಿವೇತನ ಅನೇಕ ವರ್ಷಗಳಿಂದ $7\frac{1}{2}$ ರೂಪಾ

(ಶ್ರೀ ಎ. ಜಿ. ರಾಮಚಂದ್ರರಾವ್.)

ಯಾಗಳಿರುವುದೂ ನಿಜ. ಆ 7½ ರೂಪಾಯಿಗಳನ್ನು ಹೆಚ್ಚಿಸುವ ಆವಶ್ಯಕತೆ ಕಂಡರೂ ಹಣದ ಮುಗ್ಗಟ್ಟಿನಿಂದ ಹೆಚ್ಚಿಸುವುದಕ್ಕಾಗಿಲ್ಲವೆಂಬುದು ಅವರಿಗೂ ನನಗೂ ಗೊತ್ತು. ಆದರೂ 20 ಲಕ್ಷ ರೂಪಾಯಿಗಳನ್ನು ಎಜುಕೇಷನ್ ಬಡ್ಜೆಟ್ಟಿನಲ್ಲಿ ಹೆಚ್ಚಿಸಿದ್ದಾರೆ. ಅದನ್ನೇತಕ್ಕೆ ಖರ್ಚು ಮಾಡುತ್ತಾರೋ ಗೊತ್ತಿಲ್ಲ. ವಿದ್ಯಾರ್ಥಿವೇತನವನ್ನು ಜಾಸ್ತಿ ಮಾಡಬೇಕೆಂದು ಹೇಳುವಾಗ ಈ 20 ಲಕ್ಷ ರೂಪಾಯಿಗಳು ಜಾಸ್ತಿ ಹೇಗಾಯಿತೆಂಬುದನ್ನು ವಿವರಿಸುವುದು ಬಹಳ ಅವಶ್ಯಕ. ಈಗ ಉಪಾಧ್ಯಾಯರುಗಳಿಗೆ ಕೊಡುವ ಸಂಬಳ ಇತರ ದೇಶಗಳಿಗಿಂತಲೂ ಕಡಮೆ, ಜಾಸ್ತಿಯಾಗಬೇಕಾದ್ದು ಆವಶ್ಯಕ ಎಂದು ಎಲ್ಲರೂ ಒತ್ತಾಯ ಮಾಡುತ್ತಿದ್ದಾರೆ. ಜಾಸ್ತಿ ಮಾಡುವುದಕ್ಕಾಗದಿದ್ದರೂ ಅವರಿಗಿರುವ 1, 2 ಮತ್ತು 3 ರೂಪಾಯಿಗಳ ಗ್ರೇಡುಗಳನ್ನು ಕೊಡಬೇಕಾಗಿದೆ. ಒಂದು ರೂಪಾಯಿ ಜಾಸ್ತಿಯಾದರೂ ಒಟ್ಟು 2½ ಲಕ್ಷ ರೂಪಾಯಿಗಳು ಹೆಚ್ಚುತ್ತವೆ. ಆದ್ದರಿಂದ ಕೊಟ್ಟಿರುವ ಗ್ರೇಡನ್ನು ಮಂಜೂರುಮಾಡಿಕೊಡುವುದಕ್ಕೆ ಹತ್ತಾರು ಲಕ್ಷ ಬೇಕಾಗುತ್ತದೆಂಬುದನ್ನು ಗಮನಿಸಬೇಕು. ಎರಡನೆಯದಾಗಿ ಸಾಮಾನ್ಯವಾಗಿ ಹಳ್ಳಿಯ ಸ್ಕೂಲುಗಳು ಅನೇಕವಾಗಿವೆ. ಅವಕ್ಕೆ ಬೇಕಾದ ಸಲಕರಣೆಗಳಿಲ್ಲ, ಹುಡುಗರಿಗೆ ಸ್ಲೇಟು ಪುಸ್ತಕಗಳಿಲ್ಲ, ಸೀಟುಗಳಿಲ್ಲ ಎಂದು ಹೇಳುವುದು ತಮಗೆ ಗೊತ್ತಿದೆ. ಆದರೂ ವಿದ್ಯಾಭ್ಯಾಸಕ್ಕೆ ಹೆಚ್ಚಾಗಿ ಅವಕಾಶ ಮಾಡಬೇಕೆಂಬ ದೃಷ್ಟಿಯಿಂದ ಅನುಕೂಲತೆಗಳನ್ನು ಸ್ವಲ್ಪ ಜಾಸ್ತಿ ಮಾಡಿದೆ. 13 ಸಾವಿರ ಜನ ಉಪಾಧ್ಯಾಯರಿಗೆ ಕೊಟ್ಟಿರುವ ಗ್ರೇಡಿಗನುಗುಣವಾಗಿ ಹಣ ಬೇಕಾಗುವುದರಿಂದ 20 ಲಕ್ಷ ಒದಗಿಸಿದ್ದಾರೆಂಬುದನ್ನು ಗಮನಿಸಬೇಕು. ಏಕೆ ಜಾಸ್ತಿಯಾಯಿತೆಂಬುದಕ್ಕೆ ಇಷ್ಟು ಹೇಳಬೇಕಾಯಿತು. ಈ ವರ್ಷ ಬಡ್ಜೆಟ್‌ನಲ್ಲಿರುವ ಕೊರತೆಯನ್ನು ಸರಿತೂಗಿಸಲು ಯಾವ ರೀತಿ ಖರ್ಚನ್ನು ಕಡಮೆ ಮಾಡಬೇಕೆಂಬುದನ್ನು ನೋಡುತ್ತಿದ್ದೇವೆ. ಜಾಸ್ತಿ ತೆರಿಗೆಯ ಮಸೂದೆಗಳು ತಮ್ಮ ಮುಂದಿವೆ. ಅದರಿಂದ ಬರುವ ವರಮಾನವನ್ನು ನೋಡಿ ಎಷ್ಟು ವಿದ್ಯಾರ್ಥಿಸಂಖ್ಯೆ ಹೆಚ್ಚಿದೆಯೆಂಬುದನ್ನು ನೋಡಿ ವಿದ್ಯಾಭ್ಯಾಸ ಸೌಕರ್ಯವನ್ನು ಉತ್ತಮಪಡಿಸಲು ಪೂರ್ಣ ಪ್ರಯತ್ನ ಮಾಡುತ್ತೇವೆಂದು ಭರವಸೆಕೊಡುತ್ತೇನೆ. ಶ್ರೀ ಮಾದಯ್ಯನವರು ಮತ್ತು ಮಾನ್ಯ ಮಿತ್ರರು ನಿರಾಶರಾಗಬಾರದು, ಸಾಧ್ಯವಾದಷ್ಟು ಪ್ರಯತ್ನ ಮಾಡೋಣ ಎಂದು ವಿನಂತಿ ಮಾಡಿ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎ. ಮಾದಯ್ಯ.—ನನ್ನ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Mr. SPEAKER.—Next cut motion, either 20 or 21 may be moved by Sri G. Puttaswamy.

Girls' High School at Chikmagalur.

Sri G. PUTTASWAMY.—I beg to move:

> "That the demand under the head '37. Education' for Rs. 3,77,90,000 be reduced by Rs. 100 (to raise a debate on the need for starting a Girls' High School at Chikmagalur.)"

ಸಭಾಪತಿಗಳೇ, ಸ್ವಾಮಿ, ಈ ಖೋತಾ ನಿರ್ಣಯವನ್ನು ಮಾನ್ಯ ಸಭೆಯ ಮುಂದೆ ಮಂಡಿಸುತ್ತಾ ಬಹಳ ವರ್ಷಗಳಿಂದ ಬಾಲಿಕೆಯರ ಹೈಸ್ಕೂಲಿಲ್ಲದೆ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರೂ ಸಹ ಒಟ್ಟಿಗೆ ವಿದ್ಯಾಭ್ಯಾಸ ಮಾಡುತ್ತಾ ಅನೇಕ ಅನಾನುಕೂಲಗಳಿಗೆ ಗುರಿಯಾಗಿರುತ್ತಾರೆಂದು ಹೇಳದೆ ವಿಧಿಯಿಲ್ಲ. ಈಗಾಗಲೇ Joseph Convent Schoolನಲ್ಲಿ 200 ಜನಗಳಿಗೆ ಮೇಲ್ಪಟ್ಟು ಒಂದೇ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಅನೇಕ ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆಂದು ತಿಳಿಯುತ್ತೇನೆ. ಮಲೆನಾಡಿನ ಕೇಂದ್ರವಾದ ಚಿಕ್ಕಮಗಳೂರು ಜಿಲ್ಲಾ ಕೇಂದ್ರ; ಈ ಕೇಂದ್ರದಲ್ಲಿ ಬಾಲಿಕೆಯರ ಹೈಸ್ಕೂಲನ್ನು ಸ್ಥಾಪನೆ ಮಾಡುವುದು ಅಗತ್ಯವೆಂದು ಸರ್ಕಾರಕ್ಕೆ ಕಂಡುಬಂದಿದೆಯೆಂದು ತಿಳಿದುಬಂದಿದೆ. ಆದರೂ ಏಕೋ ಇದನ್ನು ನಿಧಾನ ಮಾಡಿದ್ದಾರೆ. ಈ ವರ್ಷವಾದರೂ ಈ ಬಾಲಿಕೆಯರ ಹೈಸ್ಕೂಲನ್ನು ಸ್ಥಾಪಿಸಲು ಹಣ ಒದಗಿಸಿ ಇದನ್ನು ಮಂಜೂರುಮಾಡುತ್ತಾರೆ ಎಂದು ನಾನು ನಿರೀಕ್ಷಿಸಿದ್ದೇನೆ. ಇದೇ ಸಂದರ್ಭದಲ್ಲಿ ಇಲ್ಲಿ ಒಂದು ಕಾಲೇಜು ಕಟ್ಟಡ ಕಟ್ಟುವುದಕ್ಕಾಗಿ ಸುಮಾರು 95 ಸಾವಿರ ರೂಪಾಯಿಗಳನ್ನು ಸಾರ್ವಜನಿಕರು ವಸೂಲು ಮಾಡಿ ಯೂನಿವರ್ಸಿಟಿ ಫಂಡಿಗೆ ಜಮಾಮಾಡಿರುತ್ತಾರೆ. ಈ ರೀತಿ ಹಣ ಜಮಾ ಮಾಡಿದ್ದರೂ ಕಟ್ಟಡ ಕಟ್ಟಲು ಸರ್ಕಾರ ಮನಸ್ಸು ಮಾಡಿಲ್ಲ, ಈ ಕಟ್ಟಡದ ಆವಶ್ಯಕತೆಯನ್ನು ಮನಗಂಡು ಸ್ಕೂಲನ್ನು ಸ್ಥಾಪನೆ ಮಾಡುತ್ತಾರೆಂದು ನಂಬುತ್ತೇನೆ. ಅಲ್ಲದೆ ಚಿಕ್ಕಮಗಳೂರಿನಲ್ಲಿ ಒಂದೇ ಒಂದು ಮಿಡಲ್ ಸ್ಕೂಲು ಬೋರ್ಡಿಂಗ್ ಹೋಂ ಇದೆ. ಅದು ಕೇವಲ 40 ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾಭ್ಯಾಸ ಮಾಡಲು ಮಾರ್ಪಾಡಾಗಿದೆ. ಬೇರೆ ಜಿಲ್ಲೆಗಳಿಗೆ ಮತ್ತು ಮೈದಾನ ಪ್ರದೇಶಕ್ಕೆ ಹೋಲಿಸಿದರೆ ಕೆಲವು ಜಿಲ್ಲೆಗಳಲ್ಲಿ 50—60 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಗ್ರಾಂಟನ್ನು ಕೊಟ್ಟಿರುವಾಗ ಕೇವಲ 3 ಸಾವಿರ ರೂಪಾಯಿಗಳನ್ನು ಮಾತ್ರ ಚಿಕ್ಕಮಗಳೂರಿಗೆ ಖರ್ಚು ಮಾಡುತ್ತಿದ್ದಾರೆ. ಇಲ್ಲಿ ವಿದ್ಯಾರ್ಥಿಗಳಾದರೋ ದಿನೇ ದಿನೇ ಹೆಚ್ಚುತ್ತಾ ಇದ್ದಾರೆ. ಮಲೆನಾಡಿನ ಆ ಪ್ರದೇಶದಲ್ಲಿ ಹಿಂದುಳಿದ ಬಡವರು ಅನೇಕವಾಗಿದ್ದು ಅವರ ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯವಿಲ್ಲದೆ ಬಹಳ ಕಷ್ಟವಾಗಿದೆ. ಅಲ್ಲದೆ ಸಾರ್ವಜನಿಕರು ಅನೇಕ ಸಂದರ್ಭಗಳಲ್ಲಿ ಅವರ ವಿದ್ಯಾಭ್ಯಾಸಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ದೂರು ಹೋದಮೇಲೆ ಸರ್ಕಾರದವರು ಅದಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿಮ್ನವರ್ಗದ ಸುಮಾರು 70—80 ಸಾವಿರ ಪ್ರಜಾಸಂಖ್ಯೆಯಿರುವಾಗ ಕೇವಲ 3 ಸಾವಿರ ರೂಪಾಯಿಗಳನ್ನು ಮಾತ್ರ ಒಂದೇ ಒಂದು ವಿದ್ಯಾರ್ಥಿನಿಲಯಕ್ಕಾಗಿ ಖರ್ಚು ಮಾಡುತ್ತಿದ್ದಾರೆ.

ಬೇರೆ ಜಿಲ್ಲೆಗಳಿಗೆ 50—60 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ ನಮ್ಮ ಜಿಲ್ಲೆಗೆ ಸಮಾನ ಅವಕಾಶ ಕೊಡುವುದು ಸರ್ಕಾರದ ಕರ್ತವ್ಯವಲ್ಲವೆ? ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 7 ತಾಲ್ಲೂಕುಗಳಿವೆ. ಆ ತಾಲ್ಲೂಕುಗಳಲ್ಲಿ ಕಡೂರಿನಲ್ಲಿ ಮಾತ್ರ ನಿಮ್ನವರ್ಗದ ಹಾಸ್ಟಲುಗಳಿವೆ. ಬಾಕಿ ಉಳಿದ ತಾಲ್ಲೂಕುಗಳಲ್ಲಿ ಒಂದು ವಿದ್ಯಾರ್ಥಿನಿಲಯವು ಸಹ ಇಲ್ಲ. ಕೇವಲ ಮೂಡಿಗೆರೆ ತಾಲ್ಲೂಕು ಬಹಳ ಹಿಂದುಳಿದ ಪ್ರಾಂತ.

Mr. SPEAKER.—The cut motion is for starting a Girls' High School but you want to speak on all your cut motions in a way. You kindly confine your remarks to the cut motion you have now moved.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಈಗ ನಾನು ಹೇಳಿದ್ದಾಗಿದೆ, ಯತ್ನವಿಲ್ಲ. ಬಾಲಿಕೆಯರ ಹೈಸ್ಕೂಲು ಸ್ಥಾಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಮತ್ತು ಬಾಕಿ ಏನು ಅನಾನುಕೂಲವಿದೆಯೋ ಅದನ್ನು ನಿವಾರಿಸಿ ಆ ಜಿಲ್ಲೆಯಲ್ಲಿ ಆಗಬೇಕಾದ ಅನುಕೂಲತೆಗಳೆಲ್ಲವನ್ನೂ ಸರ್ಕಾರದವರು ಒದಗಿಸುತ್ತಾರೆಂಬ ಭರವಸೆಯ ಮೇಲೆ ನಾನು ಈ ನಿರ್ಣಯವನ್ನು ಮಂಡಿಸುತ್ತೇನೆ.

Mr. SPEAKER.—Cut motion moved:

> "That the demand be reduced by Rs. 100."

*__ಶ್ರೀ ಎ. ಜಿ. ರಾಮಚಂದ್ರರಾವ್.__—ಈ ಖೋತಾ ನಿರ್ಣಯದ ಮುಖ್ಯೋದ್ದೇಶ ಚಿಕ್ಕಮಗಳೂರಿನಲ್ಲಿ ಹೆಣ್ಣುಮಕ್ಕಳಿಗಾಗಿ ಹೈಸ್ಕೂಲನ್ನು ಪ್ರಾರಂಭಿಸುವುದು. ಆದರೆ ಚರ್ಚೆಯಲ್ಲಿ ಕಾಲೇಜು ವಿಚಾರ ಸಹ ಪ್ರಸ್ತಾಪಿಸಲ್ಪಟ್ಟಿದೆ. ಅದಕ್ಕಾಗಿ ಅಲ್ಲಿ ಈಗೊಂದು ಬಿಲ್ಡಿಂಗ್ ಸಿದ್ಧವಾಗಿದೆ. ಅದನ್ನು ಇನ್ನೂ ಉತ್ತಮಪಡಿಸುವುದಕ್ಕೂ ಅವಕಾಶವಿದೆ. ಆದುದರಿಂದ ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಹೈಸ್ಕೂಲು ವಿಚಾರ. ಅಲ್ಲಿ ಸೆಂಟ್ ಜೋಸೆಫ್ ಕಾನ್ವೆಂಟ್ ಗರ್ಲ್ಸ್ ಹೈಸ್ಕೂಲಿದೆ. ಅಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ತಕ್ಕ ಸೌಕರ್ಯಗಳಿವೆ. ಎಲ್ಲಿ ಆವಶ್ಯಕತ ಹಚ್ಚಾಗಿದೆಯೋ ಅಲ್ಲಿ ಇದಕ್ಕೆ ಅವಕಾಶ ಕಲ್ಪಿಸಬೇಕೆಂಬುದು ಸರ್ಕಾರದ ಉದ್ದೇಶ. ಆದುದರಿಂದ ಮಾನ್ಯ ಸೂಚಕರು ತಮ್ಮ ಖೋತಾ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ನನ್ನ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Educational Facilities to Backward people of Malnad.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು—ಮೂಡಿಗೆರೆ).—ಸ್ವಾಮೀ, ನನ್ನ ಖೋತಾ ಸೂಚನೆ ಈರೀತಿ ಇದೆ :

> "That the demand under the head '37. Education' for Rs. 3,77,90,000 be reduced by Rs. 100 (to raise a debate on the need for giving more educational facilities to people who are backward in Malnad parts)."

ಅಧ್ಯಕ್ಷರೇ, ಮಲೆನಾಡು ಪ್ರದೇಶದಲ್ಲಿರುವ ಹಿಂದುಳಿದ ಕೋಮಿನವರ ಹಿತದೃಷ್ಟಿಯಿಂದ ನಾನು ಈ ಖೋತಾ ಸೂಚನೆಯನ್ನು ಸಭೆಯ ಮುಂದಿಡುತ್ತೇನೆ. ಹಿಂದುಳಿದ ಪಂಗಡದವರಲ್ಲಿ ಬೆಸ್ತರು, ಬೇಡರು, ಕುಂಬಾರರು, ಕೊರಮರು, ಬಿಲ್ಲವರು, ಕೊರಚರು ಮುಂತಾದ ನಾನಾ ಜಾತಿಯವರು ಇರುತ್ತಾರೆ. ಇವರಿಗೆಲ್ಲಾ ಬೋರ್ಡಿಂಗ್ ಹೋಂಗಳಿಲ್ಲದೆ ಹಿಂದುಳಿದಿದ್ದಾರೆ. ಈ ಜನಾಂಗದ ಪರವಾಗಿ ಪ್ರತಿನಿಧಿಗಳು ಯಾರೂ ಇಲ್ಲದಿರುವುದರಿಂದ ಇವರ ಕಷ್ಟಸುಖಗಳನ್ನು ಸರ್ಕಾರದ ಮುಂದೆ ತರುವುದು ಕಷ್ಟವಾಗಿದೆ. ಇವರಿಗೆಲ್ಲಾ ಬೋರ್ಡಿಂಗ್ ಹೋಂಗಳನ್ನು ಒದಗಿಸಿಕೊಟ್ಟು ವಿದ್ಯಾರ್ಹತೆಯಲ್ಲಿ ಈ ಜನಾಂಗದವರು ಮುಂದುವರಿಯಲು ಸಮಸ್ತ ಸೌಲಭ್ಯಗಳನ್ನೂ ಒದಗಿಸಿ ಮತ್ತು ಹೆಚ್ಚಿಗೆ Scholarshipsಗಳನ್ನು ಸಹ ಕೊಡಬೇಕಾದುದು ಅತ್ಯಗತ್ಯವಾಗಿದೆ. ಹಿಂದುಳಿದ ಜನಾಂಗವು ಮುಂದೆ ಬಂದಷ್ಟೂ ನಮ್ಮ ದೇಶದ ಪ್ರಗತಿ ಹೆಚ್ಚುತ್ತದೆಂಬ ಧ್ಯೇಯವನ್ನು ಸರ್ಕಾರದವರು ಇಟ್ಟುಕೊಂಡು ಇವರಿಗೆ ಆದಷ್ಟು ಸಹಾಯವನ್ನು ಒದಗಿಸಿಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತಾ ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

> "That the demand be reduced by Rs. 100."

*__ಶ್ರೀ ಎ. ಜಿ. ರಾಮಚಂದ್ರರಾವ್.__—ಸ್ವಾಮೀ, ಮಲೆನಾಡು ಪ್ರದೇಶ ಹಿಂದುಳಿದಿದೆ, ಜನರು ಸಹ ಹಿಂದುಳಿದಿರತಕ್ಕವರು ಎಂದು ವಿದಿತವಾಗಿದೆ. ಇದನ್ನು ಅರಿತೇ ಸರ್ಕಾರದವರು ಅವರ ವಿಚಾರದಲ್ಲಿ ಉದಾರ ನೀತಿಯನ್ನು ಅನುಸರಿಸುತ್ತಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸ ಶಾಲೆಯನ್ನು ಪ್ರಾರಂಭಿಸಲು ಒಂದು ಗ್ರಾಮದಲ್ಲಿ 300 ಪ್ರಜಾಸಂಖ್ಯೆಯಾದರೂ ಇರಬೇಕೆಂಬುದನ್ನು ಸಡಿಲಮಾಡಿ ಮಲೆನಾಡು ಪ್ರದೇಶದಲ್ಲಿ 200 ಪ್ರಜಾಸಂಖ್ಯೆಯಷ್ಟಿದ್ದರೆ ಸಾಕು ಎಂದು ನಿಗದಿ ಮಾಡಿದೆ. ಸ್ಕಾಲರ್‌ಷಿಪ್ ಕೊಡುವಾಗ ಸಹ ಮಲೆನಾಡು ಪ್ರದೇಶಕ್ಕೆ ಬಾಕಿ ಕಡೆಗಿಂತ ಹೆಚ್ಚಿನ ರಿಯಾಯಿತಿ ತೋರಿಸಿದೆ. ಮಲೆನಾಡು ಹೈಸ್ಕೂಲಗೆ 50 ಮತ್ತು ಮಿಡ್ಲ್ ಸ್ಕೂಲಗೆ 50 ಜಾಸ್ತಿ ಮಾಡಿರುತ್ತಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—Backward Scholarship ನಾಲ್ಕು ಕೊಟ್ಟಿರುತ್ತಾರೆ. ಇದರಿಂದ ಹಿಂದುಳಿದ ಪಂಗಡಕ್ಕೆ ಹೆಚ್ಚಿನ ಸ್ಕಾಲರ್‌ಷಿಪ್ ದೊರಕಲು ಅನಾನುಕೂಲವೆಂಬುದು ನನ್ನ ಮೂಲ ಉದ್ದೇಶ.

*__ಶ್ರೀ ಎ. ಜಿ. ರಾಮಚಂದ್ರರಾವ್.__—ಈಗ ತಾನೇ ತಿಳಿಸಿದಹಾಗೆ ಮಲೆನಾಡು ಪ್ರದೇಶದ ವಿಚಾರದಲ್ಲಿ ಹೆಚ್ಚಿನ ರಿಯಾಯಿತಿ ತೋರಿಸುವ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಆದಕಾರಣ ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ತಮ್ಮ ಖೋತಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನನ್ನ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Payment of Government Quota to Municipal High Schools.

4 P.M.

Sri B. MADHAVACHAR (Bhadravati).—I beg to move:

> "That the demand under the head '37. Education' for Rs. 3,77,90,000 be reduced by Rs. 100 (to expedite payment of Government quotas to Municipal High Schools to enable the teachers to get their pay regularly)."

ಸ್ವಾಮೀ, ಈ ಖೋತಾ ನಿರ್ಣಯವನ್ನು ಮಂಡಿಸುವ ಉದ್ದೇಶ ಇಷ್ಟು: ಅನೇಕ ಪೌರಸಭೆಗಳಿಗೆ ಸೇರಿದ ಮುನಿಸಿಪಲ್ ಹೈಸ್ಕೂಲುಗಳಲ್ಲಿ ಉಪಾಧ್ಯಾಯರಿಗೆ ಸಕಾಲಕ್ಕೆ ಸಂಬಳ ಪಾವತಿ ಆಗುತ್ತಿಲ್ಲ. ನಾನು ಈ ವಿಚಾರವನ್ನು ಅಕಸ್ಮಾತ್ ವಿಚಾರಿಸಿದ್ದರಲ್ಲಿ ಪೌರಸಭೆ-ಜಿಲ್ಲಾಬೋರ್ಡ್‌ಗಳ ಆರ್ಥಿಕ ಸ್ಥಿತಿ ಬಹಳ ಹದಗೆಟ್ಟು ಹೋಗಿರುವುದರ ಜೊತೆಗೆ ಸರ್ಕಾರದಿಂದ ಬರುವ ಗ್ರಾಂಟು ಸಹ ನಿಧಾನವಾಗುತ್ತಿದೆ, ಸಕಾಲಕ್ಕೆ ಬರುತ್ತಿಲ್ಲವೆಂದು ತಿಳಿಯಬಂತು. ಈ ವಿಚಾರದಲ್ಲಿ ಸರ್ಕಾರದಿಂದ ತಡವಾಗಿದ್ದರೆ ಈ ರೀತಿಯ ದೋಷಾರೋಪಣೆಗೆ ಎಡೆಗೊಡದೆ ಆದಷ್ಟು ಬೇಗ ಇದನ್ನು ಸರಿಪಡಿಸಿ ಸಕಾಲದಲ್ಲಿ ಈ ಗ್ರಾಂಟು ಪೌರಸಭೆಗೆ ತಲಪುವ ವ್ಯವಸ್ಥೆಮಾಡಬೇಕೆಂದು ಕೋರಿ ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

> "That the demand be reduced by Rs. 100."

***ಶ್ರೀ ಎ. ಜಿ. ರಾಮಚಂದ್ರರಾವ್.**—ಯಾವುದಾದರೂ ಮುನಿಸಿಪಲ್ ಸ್ಕೂಲಿನ ಆಡಳಿತ ವ್ಯವಸ್ಥೆಯಲ್ಲಿ ಲೋಪ ಕಂಡುಬಂದಿದ್ದರೆ ಅಂಥ ಸಂದರ್ಭಗಳಲ್ಲಿ ಮಾತ್ರ ಗ್ರಾಂಟು ಕೊಡುವ ವಿಚಾರದಲ್ಲಿ ಸ್ವಲ್ಪ ನಿಧಾನವಾಗಿದೆಯೇ ಹೊರತು ಮತ್ತೆ ಬೇರೆ ಇಲ್ಲ. ಮುನಿಸಿಪಲ್ ಹೈಸ್ಕೂಲಿನಲ್ಲಿ ಹೊಸದಾಗಿ ಉಪಾಧ್ಯಾಯರನ್ನು ಸೇರಿಸುವಾಗ ಅದನ್ನು ಸರ್ಕಾರಕ್ಕೆ ತಿಳಿಸಿ, ಮಂಜೂರಾತಿ ಪಡೆದು ಸೇರಿಸಿದರೆ ತೊಂದರೆ ಇಲ್ಲ. ಹಾಗಿಲ್ಲದೆ ಈ ವಿಚಾರದಲ್ಲಿ ಅವರು ಮನಸ್ಸು ಬಂದ ಹಾಗೆ ವರ್ತಿಸಿ ಕೊನೆಗೆ ವರ್ಷದ ಅವಧಿಯಲ್ಲಿ ಸಿಬ್ಬಂದಿ ಜಾಸ್ತಿ ಎಂದು ಹೇಳಿದರೆ, ಅದಕ್ಕೆ ಸಂಬಂಧಪಟ್ಟ ಖರ್ಚನ್ನು ವಹಿಸುವುದಕ್ಕೆ ಆ ಮುನಿಸಿಪಲ್ ಹೈಸ್ಕೂಲಿಗೆ ಶಕ್ತಿಯಿದೆಯೇ ಎಂಬುದನ್ನು ಪರಿಶೀಲನೆ ಮಾಡಲು ತಡವಾಗುತ್ತದೆ. ಆದುದರಿಂದ ಯಾವ ಮುನಿಸಿಪಲ್ ಹೈಸ್ಕೂಲಿನ ವಿಚಾರದಲ್ಲಿಯೇ ಆಗಲಿ, ಸಿಬ್ಬಂದಿ ಜಾಸ್ತಿಮಾಡುವ ವಿಚಾರವನ್ನು ಮೊದಲು ಸರ್ಕಾರಕ್ಕೆ ತಿಳಿಸಿ ಮಂಜೂರಾತಿ ಪಡೆದಿದ್ದರೆ ಅಂಥ ಸಂದರ್ಭಗಳಲ್ಲಿ ನಿಧಾನವಾಗುತ್ತಿಲ್ಲ. ಇಷ್ಟು ವಿವರಣೆಯಿತ್ತ ಮೇಲೆ ಮಾನ್ಯ ಸೂಚಕರು ತಮ್ಮ ಖೋತಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬದ್ದೇನೆ.

ಶ್ರೀ ಬಿ. ಮಾಧವಾಚಾರ್.—ನನ್ನ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Posting Primary School teacher to Kadiranpalya in Ulsoor.

***Sri M. PALANIYAPPAN** (Ulsoor).—Sir, I beg to move:

> "That the demand under the head '37. Education' for Rs. 3,77,90,000 be reduced by Rs. 100 (to raise a debate on the need of posting a primary school teacher to Kadiranpalya in Ulsoor Constituency)."

Though the cut motion looks so simple, I have to say that this is the third time I am moving it on the floor of this House and still it has not received the attention that is due. I do not know whether any cut motion which is moved in this House, comes to the notice of the Government. Other cut motions that are included in the list but are not moved will come to the notice of the Government. So I understand. Last time I had no occasion to move my cut motion though printed in the list and I think the Government have not noticed it. I have written a letter to the Director of Public Instruction in the matter and till today I have not received any reply from him. The village people have constructed a building at their cost and they have written to the Government asking for a teacher to be posted and in spite of that, I have not received any reply from the authorities concerned. Also the other day the Hon'ble the Revenue Minister went to the place for a function and the villagers showed the building also. He was pleased to see the building and he immediately promised to grant a teacher. He intimated to the Director of Public Instruction. But till today no teacher has been posted. Similar

is the case with every place in the neighbouring villages. So I reguest the Government to definitely look into the need for posting a primary school teacher there.

Mr. SPEAKER.—Cut motion moved:

> " That the demand be reduced by Rs. 100. "

****ಶ್ರೀ ಎ. ಜಿ. ರಾಮಚಂದ್ರರಾವ್.**—ಸ್ವಾಮಿ, ಸೂಚಕರು ಮೊದಲು ಈ ಖೋತಾ ನಿರ್ಣಯವನ್ನು ಒದಿದಾಗ ಅಲಸೂರಿನಲ್ಲಿರುವ ಕಡಿರನ ಪಾಳ್ಯದಲ್ಲಿ ಒಂದು ಪ್ರೈಮರಿ ಸ್ಕೂಲು ಇದ್ದೂ ಅದಕ್ಕೆ ಉಪಾಧ್ಯಾಯರನ್ನು ನೇಮಿಸಿಲ್ಲವೇನೋ ಎಂದು ಅರ್ಥ ಮಾಡಿಕೊಂಡಿದ್ದೆ. ಆದರೆ ಈಗ ಸೂಚಕರು ತಿಳಿಸಿರುವ ಅಂಶವನ್ನು ಕೇಳಿದ ಮೇಲೆ ಅಲ್ಲಿಗೆ ಇನ್ನೂ ಸ್ಕೂಲ್ ಸಹ ಮಂಜೂರಾಗಿಲ್ಲವೆಂದು ಕಂಡುಬಂದಿದೆ. ಈಗಂತೂ ಅಲ್ಲಿನ ಕಷ್ಟಸ್ಥಿತಿಯನ್ನು ಸೂಚಕರು ತಿಳಿಸಿದ್ದಾರೆ. ಈ ವಿಚಾರದಲ್ಲಿ ಅವಶ್ಯಕತೆ ಇರುವ ಅಂಶದ ಬಗ್ಗೆ ವಿದ್ಯಾಇಲಾಖೆಯ ಡೈರೆಕ್ಟರವರಿಂದ ವರದಿ ಬಂದರೆ ಅವರೊಡನೆ ಈ ಅಂಶವನ್ನು ಪರಿಶೀಲಿಸಿ ಜಾಗ್ರತೆ ಅಲ್ಲಿ ಒಂದು ಪ್ರೈಮರಿ ಸ್ಕೂಲ್ ಸ್ಥಾಪನೆಯ ಬಗ್ಗೆ ಸೂಕ್ತಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

Sri M. PALANIYAPPAN.—I seek leave to withdraw my cut motion.

The cut motion was, by leave, withdrawn.

Mr. SPEAKER.—Sri Govinda Raju is not here. The next 12 or 14 cut motions are in the names of several members. They may select 3 or 4 of them. Till five we go on with the demand.

Sri S. SRINIVASA IYENGAR (T.-Narasipur).—In obedience to your direction, I would like to move cut motion No. 38 provided other members who have signed with me move other cut motions. I will select only one among them, in view of the direction.

Mr. SPEAKER.—From Nos. 33 to 38 there are some more cut motions. Are those who have signed those cut motions agreeable to this proposal ?

MEMBERS.—Yes.

Sri S. SRINIVASA IYENGAR.—I have some local grievances.

Mr. SPEAKER.—I will just make myself clear. Sriyuts M. Chikkalingiah and B. P. Nagaraja Murthy have signed also. Do they agree to the moving of earlier cut motions now selected ?

Sri B. P. NAGARAJA MURTHY (Malavalli).—Myself and Sri Chikkalingiah and U. M. Madappa—all the three of us have sent some other cut motions. We are satisfied if we are given chance to move any one of them.

Mr. SPEAKER.—Which are those numbers ?

Sri B. P. NAGARAJA MURTHY.—I take No. 81.

Mr. SPEAKER.—No ; we may not reach that number. Only half an hour more. So you also agree with Sri Nagaraja Murthy, Sri Chikkalingiah ?

Sri M. CHIKKALINGIAH (Malavalli—Scheduled Castes).—Yes.

Sri S. SRINIVASA IYENGAR.—Just give them each a chance to move one of their cut motions.

Mr. SPEAKER.—Let us see if at all we reach them.

4-30 P.M.

Working of the Grant-in-aid Rules.

***Sri S. SRINIVASA IYENGAR** (T.-Narasipur).—Sir, I beg to move :

> " That the demand under the head '37. Education' for Rs. 3,77,90,000 be reduced by Rs. 100 (in order to raise a discussion on the working of Grant-in-Aid Rules.)."

Sir, High School education is being given to pupils in Mysore State in 217 high schools of which 67 high schools are run by private institutions and are included under the grant-in-aid rules. Out of 217 high schools, the Government manage only 40 of them. Local bodies, that is, Municipalities manage 64 and District Boards 37. Sir, the Government framed these Grant-in-aid Rules in the year 1929 and at that time it was decided that these institutions should be paid the grant at the rate of Rs. 50 per section per annum. By 1941, they revised these rules in such a manner as to give aid at the rate of Rs. 100 per class irrespective of the number of sections in each class. And in 1947 they further liberalised it to such an extent as to meet 75 per cent of the net authorised expenditure. Sir, out of the 217 high schools, Government is managing only 40 at an estimated cost of Rs. 15.57 lakhs, while the Government is giving a grant of

(SRI S. SRINIVASA IYENGAR.)

9.61 lakhs as its share towards the management of 167 schools. Why I have given these figures is for this reason. The net authorised expenditure as determined by Government is no doubt taken into consideration for giving grants. Actually, what has happened is, in most of these grant-in-aid institutions, the salary that is given to the teachers is low. The Government have the control over the transfer and promotions of the teachers so far as it relates to the schools managed by Municipalities and District Boards. And promotions and appointments are not controlled so far as they relate to the grant-in-aid institutions other than those managed by the local bodies. Sir, when the grant-in-aid rule says that the Government will give 75 per cent of the net authorised expenditure, if the private institutions do not give increments to the teachers of these institutions, I want to know why Government should withhold their portion of it. They have committed themselves anyway to give 75 per cent of the net authorised expenditure and the remaining 25 per cent has to be met by the individual or the private institution and if the private institutions do not come forward with their 25 per cent, why should Government withhold their 75 per cent which is meant for the improvement of the conditions of the services of the teachers in the grant-in-aid institutions?

Further, I would like to put a question to the Government. When the Government knows that the authorised expenditure is only about 12 lakhs for putting 9.61 lakhs as 75 per cent of their share,—I presume that the total net authorised expenditure on account of these classes is only about 12 lakhs,—they can as well take over the control of these schools because the additional expenditure to Government would only be in the order of about 3 lakhs. Therefore I submit, Sir, that Government should see that the increments of these teachers working in grant-in-aid institutions, apart from those maintained by the local bodies, should be given irrespective of the fact whether the private institutions do come forward with their quota or not.

The other point that I wanted to say about the grant-in-aid rules is this: Grants are given at the end of the year—or I would put it this way. Whatever amount that is due to a grant-in-aid institution is given at the commencement of the next year. That means that these grant-in-aid institutions have to provide funds to run their schools for one year and then take a refund from the Government. This has caused a little inconvenience to such of those institutions which are not in a position to provide funds to run their institutions properly. Therefore, I would suggest that whatever Government decide to give to these institutions, may be paid to these institutions in instalments at least, commencing from the very beginning of the year. If grants are given by Government to these institutions in half-yearly or quarterly instalments, it would be possible for the Government to help these institutions.

Another point I wanted to submit is this, Sir: I do not know why Government have reduced the allotment towards the payment of grants to these institutions. In the year 1952-53, the Government have actually paid 11.43 lakhs towards the maintenance of equipment to these aided institutions. In 1953-54, their revised estimate shows that 7.42 lakhs would be enough and for 1954-55, they have estimated it at 9.61 lakhs. The total amount that the Government had paid in 1952-53 was 11.47 lakhs. The estimated expenditure for 1954-55 is 9.61 lakhs. I want to know why there has been a reduction in the payment of grants to these institutions when the number has not been reduced. Sir, the number of pupils that were studying in high schools in 1924 was in the order of 37,000 and today this is in the order of 1.4 lakhs. There has been a quantitative upheaval in the number of students. It is very necessary that the rules should be liberalised in such a manner as to induce people to take up opening of these high schools where Government themselves are not doing it. And therefore, whatever may be the expenditure in view of the abolition of the Lower Secondary Examination, the Government should see that they give encouragement more liberally so as to stimulate the opening of private high schools at least. That is one thing.

There is yet another point, Sir. In the year 1952-53 Government had a provision for giving equipment grants. In 1953-54 and 1954-55 they have withdrawn that provision. I want to know why Government have thought of not including the equipment grants in their allotments. Sir, in the high schools managed by the Municipalities, and District Boards, a definite scale of salary has been fixed ; and committees of these local bodies have the power to appoint teachers in the lower grade, namely, Rs. 60-5-90/EB. 6-150; and the Director of Public Instruction is empowered to promote them to the next grade namely Rs. 130-10-200 ; and Government can promote these teachers to the next higher grade of Rs. 170-10-250. All these teachers working in the Municipal High Schools and District Board High Schools are dealt with by the Director of Public Instruction in matters of transfer and promotion, while the teachers working in the aided institutions are neither given benefits of these increments in salaries nor have they a sense of security of service ; and if the Government take steps for entering into that field and take over the control of these schools also, after all the extra expenditure to Government would be very little. But at the same time, they will be assuring the services in high schools managed by private institutions and giving further encouragement in matters of providing secondary education to the pupils of the State.

Mr. SPEAKER.—Cut motion moved :

> "That the demand be reduced by Rs. 100."

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಗ್ರಾಂಟ್-ಇನ್-ಏಡ್ ರೂಲ್ಸ್ ವಿಷಯದಲ್ಲಿ ಈ ನಿರ್ಣಯ ಬಂದಿರುವುದು. ಇದರ ಜೊತೆಗೆ ಎರಡು ಮೂರು ವಿಷಯಗಳನ್ನು ನಮೂದಿಸಿದ್ದಾರೆ. ಇದರ ವಿಷಯದಲ್ಲಿ ಅವರು ನಿರೂಪಣೆಮಾಡಿದ್ದು ಶೇಕಡ 75 ಭಾಗದಷ್ಟು ಖರ್ಚನ್ನು ಸರ್ಕಾರದವರು ವಹಿಸುತ್ತಿದ್ದಾರೆ. ಆದರೆ ಅದು ನೆಟ್ ಆಥರೈಸ್ಟ್ ಎಕ್ಸ್‌ಪೆಂಡಿಚರ್, ಖಾಸಗೀ ಸಂಸ್ಥೆಗಳು ಶೇಕಡ 25 ಭಾಗವಹಿಸುತ್ತಿವೆ, ಸರ್ಕಾರದವರೇ ಏಕೆ ಅದನ್ನೂ ಕೊಡಬಾರದು ಎಂದು ಪ್ರಶ್ನೆ ಮಾಡಿದ್ದಾರೆ. Increment in salaries ಎಂಬುದನ್ನು ಬಡ್ಜೆಟ್ಟಿನಲ್ಲಿ ಯಾವ ರೀತಿ ತೋರಿಸಿದೆಯೆಂಬುದನ್ನು ಯೋಚನೆಮಾಡಬೇಕು. ಇದು ಪ್ರಾಯಶಃ ಕಾನೂನಿಗೆ ವಿರೋಧವಾಗಬಹುದು. ಮತ್ತು ಒಂದು ಸಲ ಹಾಗೆ ಮಾಡಿದರೆ ಬಾಕಿಯಾದುದನ್ನೂ ನಾವೇ ಕೊಡಬೇಕೆಂದು ಹೇಳಿದರೆ ಆಗ ಏನು ಕೊಡಬೇಕು? ಇದನ್ನು ಯೋಚನೆಮಾಡಬೇಕು. ಆದ್ದರಿಂದ ಅವರು ಸೂಚನೆಮಾಡಿರುವುದು ಈಗಿರುವ ಕಾನೂನಿಗೆ ವಿರೋಧವಾದೀತು. ಈ ಕಾನೂನು ನಮ್ಮ ಮೈಸೂರಿಗೇ ಬಹಳ ವಿಚಿತ್ರವಾಗಿದೆಯೇ ಅಥವಾ ಅಕ್ಕಪಕ್ಕದ ಪ್ರಾಂತಗಳಿಗಿಂತ ಚೆನ್ನಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಮದ್ರಾಸು ಮತ್ತು ಬೊಂಬಾಯಿ ನೋಡಿದರೆ ಶೇಕಡ 50⅔ಕ್ಕಿಂತ ಜಾಸ್ತಿಯಿಲ್ಲ. ಆದ್ದರಿಂದ ಮೈಸೂರು ದೇಶದಲ್ಲಿರುವ ಕಾನೂನೇ ಬಹಳ ಲಿಬರಲ್ಲಾಗಿದೆ. ಮತ್ತು ಸಂಸ್ಥೆಗಳನ್ನು ಹೆಚ್ಚಿಸಬೇಕೇ ಹೊರತು ಕಡಮೆಮಾಡುವುದಕ್ಕೆ ಸಾಧ್ಯವೇ ಎಂದು ಯೋಚನೆಮಾಡುವ ಕಾಲ ಬಂದಿದೆಯೆಂದು ಸೂಚಿಸುತ್ತೇನೆ.

ಆಮೇಲೆ Equipment and maintenance grant ವಿಚಾರದಲ್ಲಿ 1953-54ರಲ್ಲಿ ಏಕೆ ಕಡಮೆಯಾಯಿತೆಂದು ಕೇಳಿದ್ದಾರೆ. ಅದನ್ನು ವಿಚಾರ ಮಾಡಬೇಕು. ಅದನ್ನು ವಿಚಾರಿಸಿ ಜವಾಬು ಹೇಳುತ್ತೇನೆ.

ಮೂರನೆಯದಾಗಿ ಸಂಬಳದ ಸ್ಕೇಲಿನ ವಿಚಾರ ಹೇಳಿದ್ದಾರೆ. 60ರಿಂದ 200 ರೂಪಾಯಿಗಳವರೆಗೆ ಅವರಿಗೆ ಗ್ರೇಡ್ ಇರುವುದು ನಿಜ. ಮ್ಯಾನೇಜ್‌ಮೆಂಟಿನವರು ಅದನ್ನು ಕೊಟ್ಟು ಸರ್ಕಾರದವರು ಅವರ ಭಾಗವನ್ನು ವಹಿಸಬೇಕೆಂದು ಹೇಳಿದರೆ ಅದಕ್ಕೆ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಸೂಚಿಸಿರುವುದು ಬಾಕಿ ಅಕ್ಕಪಕ್ಕದ ಪ್ರಾಂತಗಳಿಗಿಂತ ಉತ್ತಮವಾಗಿದ್ದರೆ ಖಾಸಗಿಯವರೂ, ಸಾರ್ವಜನಿಕರೂ ಅವರ ಕರ್ತವ್ಯ ಎಷ್ಟು ಮಾಡಬೇಕೆಂದು ವಿಧಾಯಕವಾಗಿದೆಯೋ ಅಷ್ಟನ್ನು ಮಾಡುವವರೆಗೆ ಸರ್ಕಾರ ಏನು ಮಾಡುವುದಕ್ಕೆ ಸಾಧ್ಯವೆಂಬುದನ್ನು ಯೋಚನೆಮಾಡಬೇಕು. ನೀವು ನಿಮ್ಮ ಭಾಗಕೊಡಿ, ಅವರು ಅವರ ಭಾಗ ಸೇರಿಸಿ ಕೆಲಸ ಮಾಡುತ್ತಾರೆಂದು ಒತ್ತಾಯಮಾಡುವುದು ಸೂಕ್ತವಲ್ಲ. ಅವರ ಭಾಗ ಕೊಡದೆ ಸರ್ಕಾರದ ಭಾಗ ಕೊಡಿ ಎಂದು ಹೇಳುವುದು ಅಷ್ಟು ಸಮರ್ಪಕವಾಗಿಲ್ಲ.

ಕೊನೆಯದಾಗಿ ಒಂದು ಸಲಹೆ ಮಾಡಿದರು. 9 ಲಕ್ಷ ಖರ್ಚುಮಾಡುವಾಗ ಇನ್ನು 3 ಲಕ್ಷ ಏಕೆ ಕೊಡಬಾರದೆಂದು ಕೇಳಿದರು. ಸಾಮಾನ್ಯವಾಗಿ ಇದುವರೆಗೆ ಚರ್ಚೆಯಾಗಿರುವ ಹಾಗೆ ಇದು ಸಾಧ್ಯವಲ್ಲವೆಂದು ಮನಗಾಣಬೇಕು. ಏಕೆಂದರೆ ರಾಜ್ಯಾಂಗದ ಪ್ರಕಾರ ಹೆಚ್ಚು ಹಣ ಮತ್ತು ವ್ಯಾಪ್ತಿಯನ್ನು ಒಪ್ಪಿರುವಾಗ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಮಾಡಿ ಉಚಿತವಾಗಿ ಕೊಡಬೇಕು. ಎಲ್ಲಾ ಕಡೆಯೂ ವ್ಯಾಪಕವಾಗುವ ಹಾಗೆ ಮಾಡಬೇಕು. ನಮ್ಮ ಗಮನ ಆ ಕಡೆ ಇರುವಾಗ, ಅದು ಮುಖ್ಯವಾದ ಕರ್ತವ್ಯವಾಗಿರುವಾಗ ಸಾರ್ವಜನಿಕರು ಯಾವುದು ಮಾಡಬೇಕೋ ಅದಕ್ಕೆ ನಾವು ಪ್ರವೇಶಮಾಡಿದರೆ ಕರ್ತವ್ಯಲೋಪಬರಬಹುದು, ಅದಕ್ಕೆ ಅವಕಾಶಕೊಡುವುದು ಸೂಕ್ತವಲ್ಲ. ಸಾರ್ವಜನಿಕರು ಸಂಘ ಸಂಸ್ಥೆಗಳನ್ನು ಕೈಲಿಟ್ಟುಕೊಂಡು ಸಮರ್ಪಕವಾಗಿ ಮದ್ರಾಸು, ಬೊಂಬಾಯಿಗಳಲ್ಲಿ ನಡೆಯುವ ಹಾಗೆ ಮಾಡಬೇಕು.

(ಶ್ರೀ ಎ. ಜಿ. ರಾಮಚಂದ್ರರಾವ್.)

ಇನ್ನೊಂದು ಸಲಹೆಕೊಟ್ಟರು. ಗ್ರ್ಯಾಂಟನ್ನು easy instalment ಗಳಲ್ಲಿ ಕೊಡಲು ಅವಕಾಶ ಮಾಡಬೇಕು ಎಂದು ಹೇಳಿರುವುದನ್ನು ಪರಿಶೀಲಿಸಿ ಅದರಲ್ಲಿರುವ ತೊಂದರೆ ನಿವಾರಣೆ ಮಾಡುತ್ತೇವೆ. ಈ ಭರವಸೆಯ ಮೇಲೆ ಸೂಚಕರು ತಮ್ಮ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳುವರೆಂದು ನಂಬುತ್ತೇನೆ.

Sri S. SRINIVASA IYENGAR.—I seek leave to withdraw my cut motion.

The cut motion was, by leave, withdrawn.

Buildings for Boys and Adikarnataka Schools at Malavalli

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ; ಅದನ್ನು ಮಂಡಿಸುತ್ತೇನೆ:

> "'37. ವಿದ್ಯಾಭ್ಯಾಸ' ಎಂಬ ಬಾಬಿನಲ್ಲಿ ಕೋರಿರತಕ್ಕ 3,77,90,000 ರೂಪಾಯಿಗಳ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ, 100 ರೂಪಾಯಿಗಳನ್ನು ಕಡಮೆ ಮಾಡಬೇಕು. (ಮಳವಳ್ಳಿ ಟೌನಿನಲ್ಲಿ ಸರ್ಕಾರಿ ಬಾಲಕರ ಮಿಡ್ಲ್ ಸ್ಕೂಲಿನ ಮತ್ತು ಆದಿಕರ್ಣಾಟಕರ ಮಿಡ್ಲ್‌ಸ್ಕೂಲಿನ ಕಟ್ಟಡಗಳನ್ನು ಕಟ್ಟುವ ವಿಚಾರದಲ್ಲಿ ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ)."

ಈ ಖೋತಾ ನಿರ್ಣಯದಲ್ಲಿ ನಮೂದಾಗಿರುವ ಎರಡು ಶಾಲಾ ಕಟ್ಟಡಗಳ ಬಗ್ಗೆ ಅದರಲ್ಲೂ ಬಾಲಕರ ಮಿಡ್ಲ್ ಸ್ಕೂಲು ಕಟ್ಟಡಕ್ಕೆ ಸುಮಾರು ಎರಡು ವರ್ಷಗಳ ಹಿಂದೆ 57 ಸಾವಿರ ರೂಪಾಯಿಗಳ ಗ್ರ್ಯಾಂಟನ್ನು ಸರ್ಕಾರ ಕೊಟ್ಟು ಕಟ್ಟಡ ಪ್ರಾರಂಭಿಸಬೇಕೆಂದು ಸರ್ಕಾರ ಮತ್ತು ಇಂಜನಿಯರಿಂಗ್ ಇಲಾಖೆ ಕೂಡ ತೀರ್ಮಾನ ಕೊಟ್ಟರು. ಆದರೆ ಕಟ್ಟಡ ಪ್ರಾರಂಭ ಮಾಡಬೇಕೆನ್ನುವಾಗಲೇ ಯಾವ ಕಾರಣಕ್ಕೋ ಯಾರ ಅರ್ಜಿಯ ಮೇಲೋ ಸರ್ಕಾರದಿಂದ ತಡೆ ಆರ್ಡರು ಬಂತು. ಆ ಮೇಲೆ ಸಂಬಂಧಪಟ್ಟ ವಿದ್ಯಾ ಇಲಾಖೆ ಡೈರೆಕ್ಟರ್‌ರವರು ಅದನ್ನು ಖುದ್ದಾಗಿ ನೋಡಿ ಸ್ಥಳ ಪರೀಕ್ಷೆಮಾಡಿ ವರದಿ ಕಳುಹಿಸಿದಮೇಲೆ ಈ ವಿಷಯ ತೀರ್ಮಾನವಾಗದೆ ಮತ್ತೊಂದುಸಲ ವಿದ್ಯಾಸಚಿವರೇ ಸ್ಥಳಕ್ಕೆ ಖುದ್ದಾಗಿ ಬಂದು ಅಜಮಾಯಿಷಿ ಮಾಡಿ ಸುಮಾರು 6 ತಿಂಗಳ ಮೇಲಾಗಿದೆ. ಇಷ್ಟು ದಿವಸಗಳಾದರೂ ಕೂಡ ಸುಮಾರು ಎರಡು ಬಡ್ಜೆಟ್ ಕಳೆದರೂ ಕೂಡ ಈ ಕಟ್ಟಡಗಳ ನಿರ್ಮಾಣವಾಗಲಿಲ್ಲ. ಬಡ್ಜೆಟ್ಟಿನಲ್ಲಿ ಮಾತ್ರ ಅಂಕಿ ಅಂಶಗಳಿದೆ, ಪ್ರತಿಸಲವೂ ನಮೂದಿಸಿದಂತೆ ಈ ಸಾರಿಯೂ 52 ಸಾವಿರ ರೂಪಾಯಿಗಳನ್ನು ಬ್ರಾಕೆಟ್ಟಿನಲ್ಲಿ ತೋರಿಸಿದ್ದಾರೆ. ಆದರೆ ಅದರ ಅರ್ಥ ಗೊತ್ತಾಗಲಿಲ್ಲ. ಇದು ಗ್ರ್ಯಾಂಟಲ್ಲವೆ ? ಸಾರ್ವಜನಿಕರು ಹತ್ತಾರು ವರ್ಷಗಳಿಂದ ಈ ಸ್ಕೂಲು ಕಟ್ಟಡ ಸಾಲುವುದಿಲ್ಲ, ಹೊಸ ಕಟ್ಟಡ ಆಗಬೇಕು ಎಂದು ಹೇಳುತ್ತಿದ್ದು, ಮಳವಳ್ಳಿ ತಾಲ್ಲೂಕಿನವರು ಪ್ರಜಾ ಸರ್ಕಾರದಲ್ಲಿ ಹೊಡೆದಾಡಿದ್ದರ ಫಲವಾಗಿ ಈಗ ಎರಡು ವರ್ಷಗಳ ಹಿಂದೆ ಈ ಕೆಲಸ ಈಡೇರಿತೆನ್ನುವಾಗ, ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದು ಹೇಳುವಂತೆ, ಸರ್ಕಾರ ಹಣ ಕೊಟ್ಟರೂ ಯಾವುದೋ ಅರ್ಜಿ ಬಂದು ತಡೆ ಆರ್ಡರು ಬಂತು. ಹೀಗಾಗಿ ಕಟ್ಟಡ ಕಟ್ಟುವುದು ಇಷ್ಟು ನಿಧಾನವಾದರೆ ಪ್ರಜೆ ಏನು ಮಾಡಬೇಕು ? ಸರ್ಕಾರ ಈ ರೀತಿ ಇದರ ವಿಷಯದಲ್ಲಿ ನಡೆದಹಾಗೆ ನಡೆದರೆ ಹೇಗೆ ? ಬೇಗ ಬೇಗ ಕೆಲಸಗಳು ನಡೆಯಬೇಕು. ಇದೂಅಲ್ಲದೆ ಕಟ್ಟಡಗಳ ವಿಷಯದಲ್ಲಿ ಇಷ್ಟು ನಿಧಾನವಾದರೆ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಒಂದುಸಾರಿ ಎಸ್ಟಿಮೇಟ್ ಮಾಡಿ ಒಂದು ವರ್ಷ ತಡವಾದರೆ ಅನಂತರ ಬೆಲೆಗಳ ವ್ಯತ್ಯಾಸದಿಂದ ಶೇಕಡ 20—30 ರಷ್ಟು ಎಸ್ಟಿಮೇಟ್ ಹೆಚ್ಚಾಗುವುದನ್ನು ನಾವು ನೋಡುತ್ತಿದ್ದೇವೆ. ಹಾಗಿರುವಾಗ 57 ಸಾವಿರ ರೂಪಾಯಿಗಳನ್ನೊದಗಿಸಿರುವ ಕಟ್ಟಡದ ಕೆಲಸ ಒಂದು ಅರ್ಜಿಯಮೇಲೆ 2 ವರ್ಷಗಳು ನಿಧಾನವಾದರೆ ಕಟ್ಟಡವನ್ನು ಪುನಃ ಕಟ್ಟುವುದಕ್ಕೆ ಪ್ರಾರಂಭ ಮಾಡುವುದರೊಳಗಾಗಿ ಇನ್ನೂ ಹೆಚ್ಚು ಮೊಬಲಗು ಬೇಕಾಗುವಂತೆ ರಿವೈಸ್ಡ್ ಎಸ್ಟಿಮೇಟ್ ಮಾಡಿದರೆ ಸರ್ಕಾರದವರು ಅದನ್ನು ನಿಜವಾಗಿಯೂ ಪೂರೈಸುತ್ತಾರೋ ಅಥವಾ ಹಣ ಸಾಲುವುದಿಲ್ಲವೆಂದು ಹೇಳುತ್ತಾರೋ ಎಂಬ ಭಯ ಕೂಡ ಇದೆ. ಸಾಲದ್ದಕ್ಕೆ ಪ್ರತಿ ಸಾರಿಯೂ ಬಡ್ಜೆಟ್ಟಿನಲ್ಲಿ ಖೋತಾ ದೊಡ್ಡದಾಗಿ ಸಮುದ್ರವಾಗುತ್ತಿರುವಾಗ, ಅನೇಕ ಬಾಬುಗಳಿಗೆ ಹಣವಿಲ್ಲದಿರುವಾಗ ಈ ಕಟ್ಟಡದ ವೆಚ್ಚಕ್ಕೆ, ಹಣ ಸಿಕ್ಕುತ್ತದೆಯೇ ಎಂಬುದನ್ನು ನೋಡಬೇಕು. ಈ ವಿಚಾರದಲ್ಲಿ ಪ್ರಶ್ನೆಸಹ ಕಳುಹಿಸಿತ್ತು, ಜವಾಬು ಇನ್ನೂ ಬಂದಿಲ್ಲ, ನಿರೀಕ್ಷೆ ಮಾಡಬೇಕಾಗಿದೆ.

ಆದಿಕರ್ಣಾಟಕರ ಮಿಡ್ಲ್ ಸ್ಕೂಲಿನ ಸಂಬಂಧದಲ್ಲೂ ಕೂಡ 26 ಸಾವಿರ ರೂಪಾಯಿಗಳ ಒಂದು ಗ್ರ್ಯಾಂಟನ್ನು ಸರ್ಕಾರದವರು ಕೊಟ್ಟಿದ್ದಾರೆ. 57 ಸಾವಿರ ರೂಪಾಯಿಗಳನ್ನು ಕೊಟ್ಟಿರುವ ಕಟ್ಟಡವನ್ನು ಎರಡು ವರ್ಷಗಳಿಂದ ತಡೆದಿದ್ದರೂ 26 ಸಾವಿರ ರೂಪಾಯಿಗಳ ಕಟ್ಟಡದ ಕೆಲಸ ಇದ್ದಕ್ಕಿದ್ದಹಾಗೆ ಅಕಸ್ಮಾತ್ ಪ್ರಾರಂಭವಾಗಿ, ಅದನ್ನು ಕಟ್ಟುವ ಜಾಗವನ್ನು ಅಕ್ವೈರ್‌ಮಾಡದೆ ಇರುವಾಗ, ಅದಿಕರ್ಣಾಟಕ ಜನರ ಒಂದು ಗ್ರಾಮದ ಬಡಾವಣೆಗಾಗಿ ಮೀಸಲಾಗಿದ್ದ ಜಾಗದಲ್ಲಿ ಆ ಕಟ್ಟಡ ಪ್ರಾರಂಭವಾಗಿ ಅವರ ಒಂದು ಕೋರಿಕೆ ಮೇಲೆ ಸರ್ಕಾರ ಅದನ್ನು ನಿಲ್ಲಿಸಬೇಕೆಂದು ಹೇಳಿದರು. ಈ ಎರಡು ಕಟ್ಟಡಗಳ ವಿಷಯವನ್ನೂ ಒಟ್ಟಿಗೆ ಪರಿಶೀಲಿಸಿ ಜಾಗ್ರತೆ ಕಟ್ಟುವುದಕ್ಕೆ ಪ್ರಾರಂಭಿಸುತ್ತೇವೆಂದು ಸಚಿವರು ಭರವಸೆ ಕೊಟ್ಟಿದ್ದಾರೆ. ಆದರೆ ತಡೆ ಆರ್ಡರು ಏನಾಗಿದೆ, ಕಟ್ಟಡ ಪ್ರಾರಂಭಿಸುವುದು ಯಾವಾಗ ಎಂಬ ಬಗ್ಗೆ ನಿರ್ದಿಷ್ಟವಾದ ಉತ್ತರ ಬಂದಿಲ್ಲ. ಈ ರೀತಿಯಾಗಿ ತಡಮಾಡುವುದರಿಂದ ಜನರಿಗೂ ಕ್ಷೇಮವಿಲ್ಲ; ಸರ್ಕಾರಕ್ಕೂ ಒಳ್ಳೆಯ ಹೆಸರಿಲ್ಲ. ಆದ್ದರಿಂದ ಈಗಲಾದರೂ ಯೋಚನೆಮಾಡಿ ಸರ್ಕಾರದವರು ಬೇಗ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣ ಈ ವರ್ಷವೇ ಖರ್ಚಾಗಿ ಮಳವಳ್ಳಿ ತಾಲ್ಲೂಕು ಪ್ರಜೆಗಳಿಗೆ ಸೌಲಭ್ಯ ದೊರಕುವ ಹಾಗೆ ಮಾಡುತ್ತಾರೆಂದು ನಂಬಿ ಈ ಖೋತಾ ಸೂಚನೆಯನ್ನು ಮಂಡಿಸುತ್ತೇನೆ.

Mr. SPEAKER.—Cut motion moved:

> "That the demand be reduced by Rs. 100."

***ಶ್ರೀ ಎ. ಜಿ. ರಾಮಚಂದ್ರರಾವ್.**—ಸ್ವಾಮಿ, ಈ ವಿಚಾರವಲ್ಲಿ ವಿಳಂಬವಾಗಿರುವುದಕ್ಕೆ ಕಾರಣವೇನು ಎಂಬುದು ಸದಸ್ಯರಿಗೆ ಗೊತ್ತು. ಸೈಟು ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದು ಈ ವಿಚಾರದಲ್ಲಿ ಯಾವ

ನಿರ್ಧಾರಕ್ಕೂ ಬಾರದೇ ಹಾಗೇ ಉಳಿದಿದೆ. ಈಗಾಗಲೆ ಆದಿಕರ್ಣಾಟಕರ ಮಿಡ್ಲ್ ಸ್ಕೂಲ್ ಪ್ರಾರಂಭಿಸಬೇಕೆಂದು 26 ಸಾವಿರ ರೂಪಾಯಿಗಳನ್ನೂ, ಇನ್ನೊಂದು ಮಿಡ್ಲ್ ಸ್ಕೂಲ್‌ಗಾಗಿ 57 ಸಾವಿರ ರೂಪಾಯಿಗಳನ್ನೂ ಒದಗಿಸಲಾಗಿದೆ. ಆದಷ್ಟು ಜಾಗ್ರತೆಯಾಗಿ ಈ ಬಗ್ಗೆ ಇರುವ ಭಿನ್ನಾಭಿಪ್ರಾಯವನ್ನು ಸರಿಪಡಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ,

Sri B. P. NAGARAJA MURTHY.—I seek leave to withdraw the cut motion.

The cut motion was, by leave, withdrawn.

Mr. SPEAKER.—Sri V. Venkatappa was very keen in moving one of his cut motions. If the House has no objection, I will take up his cut motion, because there are only 10 minutes more. The cut motions are Nos. 61 and 62 and he can move one of them.

Sri S. GOPALA GOWDA (Sagar—Hosanagar).—What about educational reforms ?

Mr. SPEAKER.—I do not know.

Deplorable condition of School Buildings in Channapatna Taluk.

Sri V. VENKATAPPA (Channapatna).—Sir, I beg to move :

> "That the demand under the head '37. Education' for Rs. 3,77,90,000 be reduced by Rs. 100 (to raise a debate on the deplorable condition of some school buildings in Channapatna Taluk)."

ಸ್ವಾಮಿ, ಈ ತಾಲ್ಲೂಕಿನ ಕೆಲವು ಸ್ಕೂಲು ಕಟ್ಟಡಗಳು ಬಹಳ ಹೀನಸ್ಥಿತಿಯಲ್ಲಿರುವುದನ್ನು ಮಾನ್ಯ ರೆವೆನ್ಯೂ ಸಚಿವರು ಸಹ ನೋಡಿ ಆ ಬಗ್ಗೆ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೂ ಸಹ ಈ ಕಟ್ಟಡಗಳ ರಿಪೇರಿ ಬಗ್ಗೆ ಅಂದಾಜು ತಯಾರಿಸಿ ಕಳುಹಿಸುವುದಾಗಿ ಹೇಳಿದ್ದಾರೆ. ಹಿಂದೆ ಕಟ್ಟಿದ್ದ ಕೆಲವು ಸ್ಕೂಲ್ ಕಟ್ಟಡಗಳನ್ನು ಮಿಲಿಟರಿಯವರು ಬಿಟ್ಟುಹೋದ ಹಳೆಯ ಸಾಮಾನುಗಳಿಂದ ಕಟ್ಟಿರುತ್ತಾರೆ. ಅದರ ಕಾರಣ ಈ ಕಟ್ಟಡಗಳು ಅಲ್ಲಲ್ಲಿ ಬಿರುಕುಬಿಟ್ಟಿವೆ. ಛಾವಣಿಗಳು ಮುರಿದು ಹೋಗಿ ಇಂಥ ಹೀನಸ್ಥಿತಿಯಲ್ಲಿರುವ ಕಟ್ಟಡಗಳನ್ನು ರೆವೆನ್ಯೂ ಸಚಿವರು ಖುದ್ದಾಗಿ ನೋಡಿಕೊಂಡು ಬಂದು ಅವುಗಳ ರಿಪೇರಿ ಬಗ್ಗೆ ಜಾಗ್ರತೆ ಅಂದಾಜು ತಯಾರು ಮಾಡಿ ಕಳುಹಿಸಿ ಎಂದು ಹೇಳಿದರೂ ನಿಧಾನವಾಗಿರುವುದಕ್ಕೆ ಕಾರಣವೇನೆಂಬುದು ಅರ್ಥವಾಗುವುದಿಲ್ಲ. ಇಂಥ ಸ್ಕೂಲುಗಳು ಚನ್ನಪಟ್ಟಣ ತಾಲ್ಲೂಕಿನಲ್ಲಿ 8-10 ಇವೆ. ಆದಷ್ಟು ಜಾಗ್ರತೆ ಈ ವಿಚಾರದಲ್ಲಿ ಸರ್ಕಾರದವರು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ತಿಳಿಸುವುದೇ ಈ ಖೋತಾ ಸೂಚನೆಯ ಉದ್ದೇಶ.

Mr. SPEAKER.—Cut motion moved :

> "That the demand be reduced by Rs. 100."

*ಶ್ರೀ ಎ. ಜಿ. ರಾಮಚಂದ್ರರಾವ್.—ಇದನ್ನು ಪರಿಶೀಲನೆ ಮಾಡುತ್ತೇನೆ. ಈ ವಿಚಾರದಲ್ಲಿ ರೆವೆನ್ಯೂ ಸಚಿವರು ಸಹ ಎರಡು ಕಟ್ಟಡಗಳ ಬಗ್ಗೆ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೆ ತಿಳಿವಳಿಕೆ ಕೊಟ್ಟಿರುವುದು ವಾಸ್ತವ. ಆದಷ್ಟು ಮಟ್ಟಿಗೆ ಇದನ್ನು ತ್ವರಿತಗೊಳಿಸುವ ಕಾರ್ಯಕ್ರಮ ಕೈಗೊಳ್ಳುತ್ತೇನೆ.

Sri V. VENKATAPPA.—I seek leave to withdraw the cut motion.

The cut motion was, by leave, withdrawn.

Appointment of a Judge of High Court to enquire into Mysore University affairs.

Sri Mulka GOVINDA REDDY (Chitaldrug).—Sir, I beg to move :

> "That the demand under the head '37. Education' for Rs. 3,77,90,000 be reduced by Rs. 100 (to urge the necessity of instituting an enquiry by a Judge of the High Court into the affairs of the University of Mysore)."

We are all aware of certain affairs of the Mysore University. Complaints have been received time and again regarding the admission of students to different colleges, especially to technical and professional colleges. Time and again complaints have been received that late admissions are mainly responsible for the failures in examinations. The percentage of failures in the examinations is increasing year after year and the teaching in the University has gone down deplorably. The way in which the University is being administered, we all know, is not at all satisfactory. The distribution of scholarships, disbursement of scholarships, the private tuition that is allowed to some of the teachers in the University, all have led to many things which are really deplorable. Again, the appointment of examiners, correction of papers, the leakage of question papers, all these things do require serious consideration at the hands of the University. It is no use spending

(Sri MULKA GOVINDA REDDY.)

Rs. 50 to Rs. 60 lakhs every year on the University when we do not get proper return from the University. Money spent must be well spent and must be utilised for the benefit of the people. Complaints that have been received, the complaints that have been alleged, should be really enquired into. I would earnestly urge on the Government to institute an enquiry into the affairs of this University including the complaints or the suggestions made so that we may improve the present working of the University and bring credit to the University. Formerly, as you all know, the Mysore University had a very good reputation; of the professors that adorned the University, the lecturers and readers that were in the University every Mysorean should be proud. But today what is the position ? The position is the reverse. It is really regrettable that the University of Mysore, which had such a high reputation, has gone down in the estimate of the public and especially in the estimate of University people outside the Mysore State. I earnestly request the Government to institute an enquiry into these University affairs by a Judge of the High Court, by a Judge who is known to none of us and who can give a good and satisfactory report and advice to the Government, on which the Government should proceed to implement the recommendation in the report. With these few words I request the Government to accept this cut motion.

Mr. SPEAKER.—Cut motion moved:

> "That the demand be reduced by Rs. 100."

***Sri A. G. RAMACHANDRA RAO.**—Government is one with the Hon'ble Member in accepting the principle that the prestige of the University should be kept up at as high a level as possible and necessary. But two factors are brought to the notice of this House. One is the principle of autonomy The University is a learned body and we have to concede that they should have as much freedom as possible under the Constitution and therefore whether there is case made out for enquiry of this nature is the point. The second factor is this. Both the Legislative Council as well as the Legislative Assembly are fully represented in the councils of the University, namely, the Senate as well as the University Council. From them we have receivied some complaints. But no case is made out for an enquiry of the kind suggested by the mover, namely, by a High Court Judge. We must respect the autonomy of the University as much as is possible. Even in the maintenance of the prestige of the University, it is better that we allow it to the University to shape its own policies. We request Hon'ble Members of this House who are its representatives in that body to interest themselves in the affair and bring it to a better level. With these remarks I have to request the Hon'ble mover of the cut motion to withdraw his cut motion.

Sri MULKA GOVINDA REDDY.—I seek the leave of the House to withdraw the cut motion.

The cut motion was, by leave, withdrawn.

School Buildings in rural parts.

Sri G. NARAYANA GOWDA (Mulabagal—Srinivaspur).—I beg to move:

> "That the demand under the head '37. Education' for Rs. 3,77,90,000 be reduced by Rs. 100 (to draw the attention of the Government regarding construction of school buildings in rural parts of the State)."

ಸ್ವಾಮಿ, ನಮ್ಮ ದೇಶದಲ್ಲಿ ಹಳ್ಳಿಗಳಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಹಲವಾರು ಕಟ್ಟಡಗಳು ದಾನಿಗಳ ಸಹಾಯದಿಂದ ಆಗಿವೆ. ಈ ಕಟ್ಟಡಗಳನ್ನು ಸರ್ಕಾರದವರು ತಮ್ಮ ಸುಫರ್ದಿಗೆ ತೆಗೆದುಕೊಂಡಿಲ್ಲ. ಇದರ ಸಲುವಾಗಿ ಈ ಕಟ್ಟಡಗಳನ್ನು ಕೇಳುವವರೇ ಇಲ್ಲದೆ ಇವು ಬಹಳ ಹೀನಸ್ಥಿತಿಯಲ್ಲಿವೆ. ದಾನಿಗಳಿಂದ ದಾನರೂಪವಾಗಿ ಬಂದಿರುವ ಈ ಕಟ್ಟಡಗಳ ಕಡೆ ಸರ್ಕಾರದವರು ಹೆಚ್ಚು ನಿಗಾ ಕೊಡದಿರುವುದು ವ್ಯಸನಕರವಾದುದು. ಈ ವಿಚಾರದಲ್ಲಿ ಇನ್ನು ಮುಂದಾದರೂ ಸೂಕ್ತ ಗಮನ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿ ಈ ಖೋತಾ ಸೂಚನೆಯನ್ನು ಮಂಡಿಸುತ್ತೇನೆ.

Mr. SPEAKER.—The question is :

"That a sum not exceeding Rs. 3,77,90,000 be granted to the Government to defray the charges which will come in course of payment during the year ending 31st day of March 1955 in respect of 'Education'."

The motion was adopted.

MYSORE SALES TAX (AMENDMENT) BILL, 1954.

Motion to Consider—(Contd.)

5 P.M.

Sri M. V. RAMA RAO (Tumkur).—Sir, I find from the supplementary List of Business that the consideration of Bills is to commence at half-past Five. But I have no objection to start now, Sir.

Mr. SPEAKER.—It was changed later.

Sri M. V. RAMA RAO.—Sir, the Hon'ble the Minister for Revenue has proposed that this amending Bill be referred to a Select Committee of the House. Therefore, Sir, the observations which I shall now make will be confined to a brief statement of the case for giving earnest consideration to some of the points which I think should engage the serious attention of the Select Committee. I have no desire enter into a general discussion of the scheme of the Sales Tax Act or the total effect and scope of the amending Bill. Nevertheless, I consider it very important that some of the points at least must be investigated, if I may say so, without casting any aspersion or reflection upon anybody whatsoever, with complete objectivity.

Sir, much controversy has centered around the point that the Central enactment which grants exemptions from the levy of sales tax in respect of goods declared to be essential to the life of the community has been contravened in the Mysore Sales Tax Act as also in the amending Bill. It will be seen, Sir, that this Essential Goods Act (Act LII of 1952) was enacted into law by Parliament subsequent to the enactment of the Mysore Sales Tax Act in 1948 ; and the exemptions in respect of the articles enumerated in the Schedule to the Central Act LII of 1952 have been dealt with by a series of notifications issued unde Section 6 of the Mysore Sales-Tax Act of 1948 ; and Act LII itself which is a very brief enactment, makes provision for the saving of whatever legislative enactments have already been made in respect of the goods sought to be exempted by that Act from of the levy of sales-tax. The Essential Goods Declaration and Regulation of Taxes on Sale or Purchase Act of 1952 provides in Section 3 that "No law made after the commencement of this Act by the Legislature of a State imposing or authorising the imposition of tax on the sale or purchase of any goods declared by this Act to be essential for the life of the community shall have effect unless it has been reserved for the consideration of the President and has received his assent." If I understood the observations which were made during the course of the debate yesterday by my esteemed friend the Leader of the Opposition and the Hon'ble Member Sri Sreenivasa Iyengar, they argued that this Central Act which confers immunity or makes an exception in the case of certain goods from the levy of sales-tax has the effect of placing certain limitations on the legislative competence of this House. All that I would like to say in respect of it is that Section 3 of that Act itself saves whatever has been enacted into law whether within the main body of the Sales Tax Act of 1948 or by way of notifications under Section 6 of that Act declaring certain goods to be exempt from the levy of sales-tax. Therefore, Sir, I consider that these observations really lack the force which the vehemence with which they were advanced in this House would probably seem to indicate they contain. There is really nothing that prevents the State of Mysore from making proposals seeking to levy sales-tax on some of the goods which are scheduled to the Central Act if, in the opinion of